## 3:1-4

# ಕ್ರಿಸ್ತನಲ್ಲಿ ಹೊಸ ಜೀವನ (ಭಾಗ 1)

### ಮೇಲಿನ ಸಂಗತಿಗಳನ್ನು ಹುಡುಕುವದು (3:1-4)

**1ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ ಮೇಲಿರುವವುಗಳನ್ನೇ ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ.**
**2ಮೇಲಿರುವಂಥವುಗಳ ಮೇಲೆ ಮನಸ್ಸಿಡಿರಿ, ಭೂಸಂಬಂಧವಾದವುಗಳ ಮೇಳೆ ಇಡಬೇಡಿರಿ.**
**3ಯಾಕೆಂದರೆ ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ.**
**4ನಮಗೆ ಜೀವವಾಗಿರುವ ಕ್ರಿಸ್ತನು ಪ್ರತ್ಯಕ್ಷನಾಗುವಾಗ ನೀವು ಸಹ ಆತನ ಜೊತೆಯಲ್ಲಿ ಪ್ರಭಾವದಿಂದ ಕೂಡಿದವರಾಗಿ ಪ್ರತ್ಯಕ್ಷರಾಗುವಿರಿ.**

**"ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ" (3:1)**

ತಾನು ಸಭೆಗಳಿಗೆ ಬರೆದ ಬಹುಪಾಲು ಪತ್ರಿಕೆಗಳ ರೀತಿಯಲ್ಲಿಯೇ, ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ, ಪೌಲನು ಮೊದಲು ಒಂದು ಅಸ್ತಿವಾರ ಹಾಕಿದನು ಮತ್ತು ನಂತರ ಸಿದ್ಧಾಂತಿಕ ಪರಿಗಣನೆಗಳ ಮೇಲೆ ಕಟ್ಟಲ್ಪಡಬೇಕಾದ ಜೀವನ ವಿಧವನ್ನು ವರ್ಣಿಸುತ್ತಾನೆ. **ಆದಕಾರಣ** ಎಂಬ ಪದವು ಪೌಲನು ಈ ವಿನ್ಯಾಸವನ್ನು 3:1ರಲ್ಲಿ ಬಳಸುತ್ತಿದ್ದಾನೆಂಬುದನ್ನು ಸೂಚಿಸುತ್ತದೆ.[1]

ಕೊಲೊಸ್ಸೆ 3:1-4 ವಚನಗಳು ತನ್ನ ಪತ್ರಿಕೆಯ ಮುಂಚಿನ ವಿಭಾಗ (1:12-2:23) ಮತ್ತು ತನ್ನ ಪತ್ರಿಕೆಯ ಮುಖ್ಯಭಾಗದ (3:5-4:6) ನಂತರದ ವಿಭಾಗದ ನಡುವೆ ಪೌಲನ ಒಂದು ಬದಲಾವಣೆಗೊಳ್ಳುವ ಸ್ಥಾನವಾಗಿರುತ್ತವೆ. ಆತನು 2:8-23ರಲ್ಲಿ ತತ್ವಜ್ಞಾನ ಮತ್ತು ಸುಳ್ಳು ಬೋಧನೆ ಕುರಿತ ತನ್ನ ಚರ್ಚೆಯನ್ನು ಪೂರ್ತಿಗೊಳಿಸಿದನು ಮತ್ತು ನಂತರ ಕ್ರಿಸ್ತನಲ್ಲಿನ ಹೊಸ ಜೀವನದ ಬೆಳವಣಿಗೆ ಮತ್ತು ಗುಣಸ್ವಭಾವಗಳ ಕುರಿತ ಚರ್ಚೆಯನ್ನು ಆರಂಭಿಸಿದನು. 2:20 — 23ರಲ್ಲಿ ಕೊಲೊಸ್ಸೆಯವರು ಏಕೆ ಪ್ರಾಪಂಚಿಕ ತತ್ವಜ್ಞಾನ ಮತ್ತು ಬಾಲಬೋಧೆಗೆ ದಾಸರಾಗಿರಬಾರದೆಂಬದನ್ನು ವಿವರಿಸಿದ ಬಳಿಕ, ಆತನು 3:1-14ರಲ್ಲಿ ಕ್ರೈಸ್ತರು ಏನು ಮಾಡಬೇಕು ಮತ್ತು ಮಾಡಬಾರದು ಎಂಬದಕ್ಕಾಗಿ ಸಕಾರಾತ್ಮಕ ಹಾಗೂ ನಕಾರಾತ್ಮಕ ಕಾರಣಗಳನ್ನು ಕೊಟ್ಟನು. (ಪುಟ 52ರಲ್ಲಿರುವ "ಕ್ರೈಸ್ತರಿಗಾಗಿ ಮಾರ್ಗಸೂಚಿಗಳು" ನಕ್ಷೆಯನ್ನು ನೋಡಿರಿ.)

# ಕ್ರೈಸ್ತರಿಗಾಗಿ ಮಾರ್ಗಸೂಚಿಗಳು

| **ಸಕಾರಾತ್ಮಕವಾಗಿ, ನಾವು ಮಾಡತಕ್ಕದ್ದು:** | **ಕಾರಣ:** |
|---|---|
| 1. "ಮೇಲಿರುವವುಗಳನ್ನು ಹುಡುಕಿರಿ" (3:1). | 1. "ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ" (3:1). |
| 2. "ಮೇಲಿರುವಂಥವುಗಳ ಮೇಲೆ [ನಮ್ಮ] ಮನಸ್ಸಿಡಿರಿ" (3:2). | 2. "ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ" (3:3). |
| 3. ಕೆಲವೊಂದು ಸದ್ಗುಣಗಳನ್ನು "ಧರಿಸಿಕೊಳ್ಳಿರಿ" (3:12). | 3. "[ನೀವು] ದೇವರಿಂದ ಆರಿಸಿಕೊಂಡವರೂ ಪ್ರತಿಷ್ಠಿತರೂ ಪ್ರಿಯರೂ ಆಗಿರುವದರಿಂದ" (3:12). |

| **ನಕಾರಾತ್ಮಕವಾಗಿ, ಮಾಡಬಾರದ್ದೇನಂದರೆ:** | **ಕಾರಣ:** |
|---|---|
| 1. ನಮ್ಮ ಮನಸ್ಸುಗಳನ್ನು "ಭೂಸಂಬಂಧವಾದವುಗಳ ಮೇಲೆ ಇಡಬೇಡಿರಿ" (3:2). | 1. "ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ" (3:3). |
| 2. "ನಿಮ್ಮಲ್ಲಿರುವ ಭೂಸಂಬಂಧವಾದ ಭಾವಗಳನ್ನು ಸಾಯಿಸಿರಿ" (3:5). | 2. ಅವಿಧೇಯರ ಮೇಲೆ "ದೇವರ ಕೋಪವು ಉಂಟಾಗುವ" ಸಮಯದಲ್ಲಿ "ನೀವು ಸಹ ಆತನ ಜೊತೆಯಲ್ಲಿ ಪ್ರಭಾವದಿಂದ ಕೂಡಿದವರಾಗಿ ಪ್ರತ್ಯಕ್ಷರಾಗುವಿರಿ" (3:4, 6). |
| 3. ಕೆಲವೊಂದು ಕೃತ್ಯಗಳನ್ನು "ವಿಸರ್ಜಿಸಿಬಿಡಿರಿ" (3:8). | 3. "[ನೀವು] ನೂತನಸ್ವಭಾವವನ್ನು ಧರಿಸಿಕೊಂಡಿದ್ದೀರಲ್ಲವೇ" (3:10.) |

ಪೌಲನು ಒಂದು ವಿಭಾಗವನ್ನು "ಆದಕಾರಣ" ಎಂಬದರೊಂದಿಗೆ ಆರಂಭಿಸಿದರೆ, ಆತನು ಈ ಮುಂಚೆ ಹೇಳಲ್ಪಟ್ಟದ್ದೊಂದನ್ನು ಸೂಚಿಸುತ್ತಿದ್ದಾನೆಂದು ಅರ್ಥವಾಗುತ್ತದೆ. ಕೊಲೊಸ್ಸೆಯಲ್ಲಿರುವ ಕ್ರೈಸ್ತರು ದೀಕ್ಷಾಸ್ನಾನದ ವೇಳೆ ಕ್ರಿಸ್ತನ ಜೊತೆಯಲ್ಲಿ ಮರಣಿಸಿದವರಾಗಿದ್ದರು (2:20) ಮತ್ತು ಆತನೊಂದಿಗೆ ಎಬ್ಬಿಸಲ್ಪಟ್ಟಿದ್ದರು (2:12, 13). ದೀಕ್ಷಾಸ್ನಾನ ಮಾಡಿಸಿಕೊಳ್ಳುವವರಾಗಿ, ಅವರು ಯೇಸುವಿನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳಲ್ಲಿ ಪಾಲುಗಾರರಾಗಿದ್ದರು, ಅದರ ಮೂಲಕ ಅವರು ಆತ್ಮೀಕವಾಗಿ ಬದುಕಿಸಲ್ಪಟ್ಟಿದ್ದರು. ಕ್ರಿಸ್ತನೊಂದಿಗೆ ಈ ಅನುಭವವನ್ನು ಹೊಂದಿದ ಬಳಿಕ ಉಂಟಾಗಬೇಕಾದ ರೂಪಾಂತರದ ಬಗ್ಗೆ ಚರ್ಚಿಸುವದಕ್ಕಾಗಿ ಪೌಲನು ಈ ಯೋಚನೆಗೆ ಹಿಂದಿರುಗುತ್ತಾನೆ.

2:20ರಲ್ಲಿದ್ದ ಪ್ರಕಾರವೇ, 1ನೇ ವಚನದಲ್ಲಿ ವ್ಯಕ್ತಪಡಿಸಲಾಗಿರುವ ದಾದರೆ ಎಂಬ ಸಂಭಾವನಾವಾಚಕ ವಾಕ್ಯಭಾಗವು, ಕೊಲೊಸ್ಸೆಯವರು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿದ್ದರೋ ಎಂಬ ಸಂಶಯವನ್ನು ಸೂಚಿಸುವದಿಲ್ಲ. ಬದಲಾಗಿ, ಅವರು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟ ವೇಳೆ ಆರಂಭಿಸಿದ ಹೊಸ ಜೀವನವನ್ನು ಬಿಡದೆ ಮುಂದುವರೆಸಿಕೊಂಡು ಹೋಗುವಂತೆ ಅವರಿಗೆ ಕರೆಕೊಡಲು ಪೌಲನಿಗೆ ಒಂದು ತಳಹದಿಯನ್ನು ಒದಗಿಸುವದಾಗಿರುತ್ತದೆ. "ದಾದರೆ" ಎಂಬುದಕ್ಕಾಗಿರುವ ಪದವನ್ನು "ಆದ್ದರಿಂದ" ಎಂದು ಅನುವಾದಿಸಬಹುದು. ಇದನ್ನು ಒತ್ತಿ ಹೇಳಿದ ಬಳಿಕ, ಪೌಲನು ಬಳಿಕ ಅವರಿಗೆ ಮೇಲಿರುವವುಗಳನ್ನು ಹುಡುಕಿರಿ ಎಂದು ಆಜ್ಞಾಪಿಸುತ್ತಾನೆ. ಆತನೊಂದಿಗೆ ಹೊಸ ಜೀವನದೊಳಗೆ ಪ್ರವೇಶಿಸಿರುವವರಾಗಿ, ಅವರು "ಮೇಲಿರುವಂಥವುಗಳಿಗಾಗಿ" ಬದುಕಬೇಕಾಗಿತ್ತು.

**ಕ್ರಿಸ್ತನೊಂದಿಗೆ ಎಬ್ಬಿಸಲ್ಪಡುವದಕ್ಕೆ** ಮುಂಚೆ, ಈ ವ್ಯಕ್ತಿಗಳು ಆತನೊಂದಿಗೆ ಹೂಣಲ್ಪಟ್ಟಿದ್ದರು, ಅದು ಅವರನ್ನು ಪಾಪದ ಪಾಲಿಗೆ (ರೋಮಾ 6:1-6; "ಆತನೊಂದಿಗೆ" ಎಂಬುದರ ವಿಷಯವಾಗಿ 3:3, 4ರ ಮೇಲಿನ ಚರ್ಚೆಯನ್ನು ನೋಡಿರಿ) ಮತ್ತು ಪ್ರಪಂಚದಿಂದ ಸೃಷ್ಟಿಸಲ್ಪಟ್ಟ ನಿಯಮಗಳ ಪಾಲಿಗೆ ಸತ್ತವರನ್ನಾಗಿ ಮಾಡಿರತಕ್ಕದ್ದು. ಪೌಲನು ಎರಡು ಪೂರ್ವಕಲ್ಪನೆಗಳನ್ನು ಮಾಡುತ್ತಾನೆ: ಅವರು ಕ್ರಿಸ್ತನೊಂದಿಗೆ ಸತ್ತವರಾಗಿದ್ದರು ಮತ್ತು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟವರಾಗಿದ್ದರು (ಕೊಲೊಸ್ಸೆ 2:12, 20). ಆತನೊಂದಿಗೆ ಸಾಯುವ ಮೂಲಕ, ಅವರು ಜೀವನದ ವಿಷಯದಲ್ಲಿ ಪ್ರಾಪಂಚಿಕ ಜ್ಞಾನ ಮತ್ತು ದಾರಿಗಳಿಂದ ತಮ್ಮ ಸಂಬಂಧವನ್ನು ಕಡಿದುಕೊಂಡಿದ್ದರು.

ಅವರ ಹೊಸ ಕೇಂದ್ರಬಿಂದು ಕ್ರಿಸ್ತನೇ ಆಗಿದ್ದನು, ಮತ್ತು ಅವರು ಆತನಿರುವಂಥ ಪರಲೋಕದ ವಾಸ್ತವಿಕತೆಗಳನ್ನು ಹುಡುಕಬೇಕಾಗಿತ್ತು. ಅವರ ದೃಷ್ಟಿಯು ಕೆಳಮುಖವಾಗಿ ಪ್ರಾಪಂಚಿಕ ಮೂಲತತ್ವಗಳ ಕಡೆಗೆ ಇರಕೂಡದಿತ್ತು, ಆದರೆ ಮೇಲ್ಮುಖವಾಗಿ ಕ್ರಿಸ್ತನ ಮತ್ತು ಆತನ ಆಜ್ಞೆಗಳ ಕಡೆಗೆ ಇರಬೇಕಿತ್ತು. ಅವರ ಮನಸ್ಸಿನ ದಿಕ್ಕನ್ನು ಬದಲಾಯಿಸುವದು ತನ್ನಿಂದ ತಾನೇ ಸಂಭವಿಸುವಂತದ್ದಾಗಿರಲಿಲ್ಲ; ಅವರ ತಮ್ಮ ಪಾಲಿನ ಪ್ರಯಾಸವನ್ನು ಪಡಬೇಕಿತ್ತು. ಅವರ ಯೋಚನೆಯಲ್ಲಿ ಹೊಸ ಆಸಕ್ತಿಗಳಿಗೆ ಪ್ರಾಧಾನ್ಯತೆ ಕೊಡಬೇಕಿತ್ತು.

ದೀಕ್ಷಾಸ್ನಾನದ ವೇಳೆಯಲ್ಲಿ ಸಂಭವಿಸುವ ರೂಪಾಂತರದ ಬಗ್ಗೆ J. B. Lightfoot ಹೀಗೆ ವರ್ಣಿಸುತ್ತಾನೆ:

> ದೀಕ್ಷಾಸ್ನಾನದಲ್ಲಿ ಸಂಭವಿಸುವ ಬದಲಾವಣೆಯು, ನಿಜವಾಗಿಯೂ ಸಿದ್ಧಿಸಿಕೊಳ್ಳುವದಾದರೆ, ಒಬ್ಬ ಮನುಷ್ಯನ ಇಡೀ ಸ್ವಭಾವವನ್ನು ವ್ಯಾಪಿಸಿಕೊಳ್ಳತಕ್ಕದ್ದು. ಅದು ಆತನ ಕಾರ್ಯತಃ ನಡವಳಿಕೆಯ ಮೇಲೆ ಮಾತ್ರ ಪ್ರಭಾವ ಬೀರುವದಿಲ್ಲ, ಆದರೆ ಆತನ ಬುದ್ಧಿಯ ಭಾವನೆಗಳ ಮೇಲೆ ಸಹ ಪ್ರಭಾವ ಬೀರುವದಾಗಿದೆ. ಅದು ಹೆಚ್ಚು ಕಡಿಮೆ ಅಸ್ತಿತ್ವದ ಹೊಸ ಮಂಡಲದೊಳಗೆ ಪ್ರವೇಶಿಸುವದೇ ಆಗಿರುತ್ತದೆ. ಆತನು ಭೂಮಿಯಿಂದ ಪರಲೋಕಕ್ಕೆ ಪರಿವರ್ತಿಸಲ್ಪಡುತ್ತಾರೆ; ಮತ್ತು ಈ ಪರಿವರ್ತನೆಯೊಂದಿಗೆ ಆತನ ದೃಷ್ಟಿಕೋನವು ಬದಲಾಗುತ್ತದೆ, ಆತನ ತೀರ್ಪು ಮಾಡುವ ಮಾನದಂಡ ಸಂಪೂರ್ಣ ಮಾರ್ಪಡುತ್ತದೆ. ಭೌತವಸ್ತು ಆತನಿಗೆ ಇನ್ನು ಮೇಲೆ ದೊಡ್ಡ ವೈರಿಯಾಗಿರುವದಿಲ್ಲ; ಅದರೆಡೆಗೆ ಆತನ ನಿಲುವು ತಟಸ್ಥವಾದದ್ದಾಗಿರುತ್ತದೆ. ಬ್ರಹ್ಮಚರ್ಯದ ನಿಯಮಗಳು, ನೇಮನಿಷ್ಠೆಯ ನಿಬಂಧನೆಗಳು, ಯಾವ ಪರಿಣಾಮ ಹೊಂದಿದ್ದರೂ ಸರಿಯೇ, ಇನ್ನು ಅವುಗಳು ಯಾವದೇ ಸಂಪೂರ್ಣ ಮೌಲ್ಯ ಹೊಂದಿರುವದಿಲ್ಲ. ಭೂಮಿಯ ಮೇಲಿನ ಈ ಸಂಗತಿಗಳೆಲ್ಲಾ ಭೂಸಂಬಂಧವಾದವುಗಳಾಗಿವೆ. ಐಹಿಕ, ಕ್ಷಣಿಕ, ಪ್ರಾಪಂಚಿಕವಾದದ್ದು ಹೋಗಿ ನೈತಿಕ, ಶಾಶ್ವತ, ಪರಲೌಕಿಕವಾದದ್ದು ಬಂದಿರುತ್ತದೆ.[2]

"ಎಬ್ಬಿಸಲ್ಪಟ್ಟಿರುವದರಿಂದ" ಎಂಬುದಕ್ಕಾಗಿರುವ ಗ್ರೀಕ್ ಪದವು, συνεγείρω (*sunegeirō*), ಇದು 2:12ರಲ್ಲಿ ಕಾಣಿಸಿಕೊಳ್ಳುವ ಅದೇ ಪದವಾಗಿದ್ದು, ಅಲ್ಲಿ ಅದು "ಎದ್ದು ಬಂದಿರಿ" ಎಂದು ಅನುವಾದಿಸಲ್ಪಟ್ಟಿದೆ. ಕಾಲರೂಪವು ಪೂರ್ತಿಗೊಂಡ ಕ್ರಿಯೆಯನ್ನು ಸೂಚಿಸುತ್ತದೆ. ಗ್ರೀಕ್.ನಲ್ಲಿ ಸಂಭವನಾವಾಚಕದ ವಾಕ್ಯಭಾಗ ರೂಪವು ಸ್ಥಿತಿಯು ಪೂರ್ಣಗೊಳಿಸಲ್ಪಟ್ಟಿದೆ ಎಂಬ ಸೂಚ್ಯಾರ್ಥವನ್ನು ನೀಡುತ್ತದೆ.[3] ಅವರು "ಕ್ರಿಸ್ತನೊಂದಿಗೆ" ಪುನರುತ್ಥಾನಗೊಂಡಿದ್ದ ರಾದ್ದರಿಂದ, ಕೊಲೊಸ್ಸೆಯವರು ತಮ್ಮ ಯೋಚನೆಯ ರೀತಿಯನ್ನು ಬದಲಾಯಿಸಿಕೊಂಡು ತಮ್ಮ ಮನಸ್ಸನ್ನು ಆತನ ಮೇಲೆಯೇ ಇಡಬೇಕಿತ್ತು, ಮತ್ತು ಆತನೊಂದಿಗಿನ ತಮ್ಮ ಸಹವಾಸವನ್ನು ಪೋಷಣೆ ಮಾಡಿಕೊಳ್ಳಬೇಕಿತ್ತು.

ಸಹೋದರರು ಇನ್ನು ಮೇಲೆ ಲೋಕದ ಸಂಗತಿಗಳನ್ನು ಹುಡುಕಬಾರದಿತ್ತು (2:20). ಈಗ ಅವರು ಪರಲೋಕದ ಮೌಲ್ಯವುಳ್ಳ ಸಂಗತಿಗಳನ್ನು ಹುಡುಕಬೇಕಿತ್ತು (3:1). ಅವರು "ಶಾರೀರಿಕ ಇಚ್ಛೆಗಳ" ಕಡೆಯಿಂದ ದೃಷ್ಟಿಯನ್ನು ಕಿತ್ತು ಯೇಸುವಿನ ಮೇಲೆಯೇ ತಮ್ಮ ದೃಷ್ಟಿಯನ್ನಿಡುವ (ಇಬ್ರಿಯ 12:1, 2) ಮೂಲಕ ಅವುಗಳ ಸಮಸ್ಯೆಯನ್ನು ನೀಗಿಸಿಕೊಳ್ಳಬೇಕಿತ್ತು (2:23). ಅವರು ಜೀವನದ ಕುರಿತು ಹೊಸ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕಾಗಿತ್ತು, ಅದು ಕ್ರಿಸ್ತನ ಸಾರೂಪ್ಯವನ್ನು ಧರಿಸಿಕೊಳ್ಳುವದಕ್ಕಾಗಿ ಆತನನ್ನು ಮಹಿಮೆ ಪಡಿಸುವದಕ್ಕೆ ಸಮರ್ಪಿತವಾದ ಜೀವನವಾಗಿರಬೇಕಾಗಿತ್ತು.

### "ಮೇಲಿರುವವುಗಳನ್ನು ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನರೂಢನಾಗಿದ್ದಾನೆ" (3:1)

ಯೇಸುವಿನೊಂದಿಗೆ ಎಬ್ಬಿಸಲ್ಪಟ್ಟದ್ದರ ಫಲಿತವಾಗಿ, ಕೊಲೊಸ್ಸೆಯವರು ತಮ್ಮ ಮನಸ್ಸುಗಳನ್ನು ಆತ್ಮೀಕ ಕಾರ್ಯಗಳ ಕಡೆಗೆ ತಿರುಗಿಸಬೇಕಾಗಿತ್ತು. **ಹುಡುಕಿರಿ** ಎಂದು ಅನುವಾದಿಸಲ್ಪಟ್ಟಿರುವ ζητεῖτε (*zēteite*) ಎಂಬ ಪದವು, ನಿರಂತರವಾಗಿ ಕ್ರಿಯೆಯು ಸಾಗಬೇಕೆಂಬ ಆಜ್ಞೆಯನ್ನು ವ್ಯಕ್ತಪಡಿಸುತ್ತದೆ. ಅದರರ್ಥವು ಹುಡುಕುತ್ತಲಿರಿ, ಅನ್ವೇಷಿಸುತ್ತೀರಿ, ಕಂಡುಕೊಳ್ಳುವದಕ್ಕೆ ಪ್ರಯಾಸ ಪಡಿರಿ ಎಂದಾಗಿರುತ್ತದೆ. ಪೌಲನ

ಪತ್ರಿಕೆಯನ್ನು ಸ್ವೀಕರಿಸಿಕೊಂಡವರು ಪರಲೋಕದ ಸ್ವಭಾವವನ್ನು ಕಂಡುಕೊಳ್ಳುವ ಅಗತ್ಯತೆ ಮಾತ್ರವಿರಲಿಲ್ಲ, ಆದರೆ ಅವರು ಅದನ್ನು ಹೊಂದಿಕೊಳ್ಳುವ ಅಗತ್ಯತೆ ಸಹ ಇತ್ತು. ಅದೇ ರೀತಿಯಲ್ಲಿ ಅವರು ನಂಬಿಕೆಯಲ್ಲಿ ನೆಲೆಗೊಳ್ಳಬೇಕಿತ್ತು (1:23), ಅವರು ಮೇಲಿನವುಗಳನ್ನು ಹುಡುಕುತ್ತಲಿರಬೇಕಾಗಿತ್ತು.

ἄνω (*anō*) ಪದವು ಇಲ್ಲಿ "ಮೇಲೆ" ಎಂದು ಅನುವಾದಿಸಲ್ಪಟ್ಟಿದ್ದು, ಇದು ಯೋಹಾನ 8:23, ಗಲಾತ್ಯ 4:26, ಮತ್ತು ಫಿಲಿಪ್ಪಿ 3:14ರಲ್ಲಿ ಇದೇ ರೀತಿಯಲ್ಲಿ ಬಳಸಲ್ಪಟ್ಟಿದೆ. **ಮೇಲಿರುವವುಗಳನ್ನು** ಎಂಬ ಪದಗುಚ್ಛವು ಹೊಸ ಒಡಂಬಡಿಕೆಯೊಳಗೆ ಬೇರೆ ಎಲ್ಲಿಯೂ ಕಾಣಿಸಿಕೊಳ್ಳುವದಿಲ್ಲ. ಅವರ ಹೊಸ ಸಂಬಂಧವನ್ನು ಸರಿಯಾದ ರೀತಿಯಲ್ಲಿ ಕಾಣುವದಕ್ಕೋಸ್ಕರ, ಕೊಲೊಸ್ಸೆಯವರು ತಮ್ಮ ಕಣ್ಣುಗಳಲ್ಲಿರುವ ಈ ಜೀವನದ ಹೊಲಸು ಮತ್ತು ಕೆಸರನ್ನು ತೆಗೆದು ಹಾಕಿ ಹೊಸ ಜೀವನವನ್ನು ಸಕ್ರಿಯವಾಗಿ ಗುರಿಯಾಗಿಟ್ಟುಕೊಂಡು ಹೋಗುವವರಾಗಿರಬೇಕು. ಇದರ ಅರ್ಥವು ಅವರು ಭೂಲೋಕದಲ್ಲಿನ ಜವಾಬ್ದಾರಿಗಳ ವಿಷಯದಲ್ಲಿ ಕಣ್ಣುಗಳನ್ನು ಮುಚ್ಚಿಕೊಂಡವರಾಗಿ ಕೇವಲ ಆತ್ಮೀಕವಾದವುಗಳ ಮೇಲೆಯೇ ಯೋಚಿಸಬೇಕೆಂದು ಆಗಿರುವದಿಲ್ಲ; ಅವರು ಹೊಸ ಜೀವನವನ್ನು ಒಂದು ದೈವಿಕ ದೃಷ್ಟಿಕೋನದಿಂದ ನೋಡುವವರಾಗಬೇಕು ಎಂದು ಇದರರ್ಥವಾಗಿರುವದು.

ಕ್ರೈಸ್ತರಾಗಿ, ನಮ್ಮ ಆದ್ಯತೆಗಳನ್ನು ಸಮತೋಲನಗೊಳಿಸಿಕೊಳ್ಳುವದಕ್ಕೆ ಕಲಿತುಕೊಳ್ಳಬೇಕು. ನಾವು ಪರಲೋಕದ ಸಂಗತಿಗಳನ್ನು ಹುಡುಕುವದಕ್ಕೆ ಸಾಧ್ಯವಾಗದಂತೆ ಪ್ರಾಪಂಚಿಕ ವ್ಯವಹಾರಗಳಲ್ಲಿಯೇ ಸಿಕ್ಕಿಕೊಳ್ಳಬಾರದು, ಅಲ್ಲದೆ ನಾವು ಭೂಲೋಕದ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿಭಾಯಿಸದವರಾಗುವಷ್ಟರ ಮಟ್ಟಿಗೆ ಪರಲೋಕಕ್ಕೆ ಹೋಗುವ ವಿಷಯದಲ್ಲಿಯೇ ಅತ್ಯಂಥ ಮಗ್ನರಾಗಿರುವವರೂ ಆಗಿರಬಾರದು. ನಮ್ಮ ಭೂಲೋಕದ ಜವಾಬ್ದಾರಿಗಳನ್ನು ನಮ್ಮ ಭಕ್ತಿಯ ಲಕ್ಷ್ಯಗಳೊಂದಿಗೆ ಸಂಬಂಧಪಡಿಸಿಕೊಳ್ಳುವ ಮೂಲಕ ಸರಿಯಾದ ಸಮತೋಲನವನ್ನು ಸಾಧಿಸಿಕೊಳ್ಳಬಹುದಾಗಿದೆ.

ನಾವು ಯೇಸುವನ್ನು ದೈಹಿಕವಾಗಿ ನೋಡುವದಕ್ಕೆ ಸಾಧ್ಯವಿಲ್ಲ, ಆದರೆ ಆತನು ಆರೋಹನಗೊಂಡು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆಂದು ಗ್ರಹಿಸಿಕೊಳ್ಳಬಲ್ಲೆವು. ಪರಲೋಕದ ಸ್ಥಿತಿಯಲ್ಲಿ, ಯೇಸುವಿನ ಸುತ್ತಲೂ ಕೇವಲ ನಿರ್ಮಲ ಹಾಗೂ ಪಾಪರಹಿತವಾದದ್ದೇ ಇರುತ್ತದೆ. ಆತನ ಹಿಂಬಾಲಕರಾಗಿ, ನಾವು ಆತನೊಂದಿಗೆ ಹಾಗೂ ಆತನನ್ನು ಸುತ್ತುವರೆದಿರುವ ಪರಿಶುದ್ಧತೆಯೊಂದಿಗೆ ಗುರುತಿಸಿಕೊಂಡವರಾಗಿ ನಮ್ಮನ್ನು ಕಲ್ಪಿಸಿಕೊಳ್ಳತಕ್ಕದ್ದು.

ಪೌಲನು ಕೊಲೊಸ್ಸೆಯವರಿಗೆ ಬರೆದ ಕಾಲದಲ್ಲಿ, ಯೇಸು ಭೂಮಿಗೆ ಬರುವದಕ್ಕೆ ಮುಂಚೆ ಇದ್ದಂಥ ತನ್ನ ನಿವಾಸಸ್ಥಾನವಾದ ಪರಲೋಕದಲ್ಲಿದ್ದನು. ಆತನು ತನ್ನ ಪುನರುತ್ಥಾನವಾಗಿ ನಾಲ್ವತ್ತು ದಿನಗಳ ಬಳಿಕ ದೇವರ ಬಲಗಡೆಯಲ್ಲಿ ಆಳ್ವಿಕೆಯನ್ನು ಮಾಡುವದಕ್ಕೆ ಭೂಮಿಯಿಂದ ಪರಲೋಕಕ್ಕೆ ಆರೋಹನಗೊಂಡನು (ಅಪೊಸ್ತಲರ ಕೃತ್ಯಗಳು 1:3, 9-11), ಅದು ಅತ್ಯಂಥ ಉನ್ನತವಾದ ಗೌರವದ ಸ್ಥಾನವಾಗಿತ್ತು. ಬೇರೆ ಯಾವ ಜೀವಿಗಳಿಗೂ, ದೇವದೂತರಿಗೆ ಸಹ, ಅಂತಹ ಅಧಿಕಾರದ ಸ್ಥಾನವು ಕೊಡಲ್ಪಟ್ಟಿರುವದಿಲ್ಲ (ಇಬ್ರಿಯ 1:13). ದಾವೀದನು ದೇವರ ಬಲಗಡೆಯಲ್ಲಿ ಯೇಸುವಿನ

ಪಟ್ಟಭಿಷೇಕದ ಕುರಿತಾಗಿ ಪ್ರವಾದಿಸಿದನು (ಕೀರ್ತನೆ 110:1), ಮತ್ತು ಯೇಸು ಈ ಶಾಸ್ತ್ರದ ಭಾಗವನ್ನು ತನಗೆ ಅನ್ವಯಿಸಿಕೊಂಡನು (ಮತ್ತಾಯ 22:44; 26:64; ಮಾರ್ಕ 12:36; ಲೂಕ 20:41-44). ಆತನ ಪರಲೋಕಾರೋಹಣದ ಬಳಿಕ, ಆತನು ದೇವರ ಬಲಗಡೆಯಲ್ಲಿರುವದು ಒಂದು ಸ್ಥಾಪಿಸಲ್ಪಟ್ಟ ಸತ್ಯವಾಗಿ ಪ್ರಸ್ತಾಪಿಸಲ್ಪಟ್ಟಿರುತ್ತದೆ.[4]

ಯೇಸು ಎಬ್ಬಿಸಲ್ಪಟ್ಟು, ಆರೋಹಣಗೊಂಡು ದೇವರ ಬಲಗಡೆಯಲ್ಲಿ ಕುಳಿತುಕೊಂಡ ವೇಳೆ, ಸಮಸ್ತವೂ ಆತನ ಪಾದಗಳ ಕೆಳಗೆ ಇಡಲ್ಪಟ್ಟಿತು (ಎಫೆಸ 1:20-22), ಅದರಲ್ಲಿ "ದೇವದೂತರೂ ಅಧಿಕಾರಗಳೂ ಮಹತ್ವಗಳೂ" ಸೇರಿರುತ್ತವೆ (1 ಪೇತ್ರ 3:22). ಆತನ ರಾಜ್ಯವು (ಕೊಲೊಸ್ಸೆ 1:13) ಮತ್ತು ಆಳ್ವಿಕೆಗಳು ಸದಾಕಾಲದಿಂದಲೂ ಅಸ್ತಿತ್ವದಲ್ಲಿರುತ್ತವೆ. ಆತನು ಈಗ ತಂದೆಯನ್ನು ಹೊರತು ಪಡಿಸಿ ಸಮಸ್ತದ ಮೇಲೆಯೂ ಸರ್ವರ ಮೇಲೆಯೂ ಆಳ್ವಿಕೆಯನ್ನು ಮಾಡುತ್ತಾನೆ. ಆತನು ತಾನು ಹಿಂದಿರುಗಿ ಬರುವ ತನಕ ಆಳ್ವಿಕೆ ಮಾಡುವನು, ಆಗ ಆತನು ತನ್ನ ರಾಜ್ಯವನ್ನು ತಂದೆಗೆ ಒಪ್ಪಿಸಿ ಬಿಡುವನು (ಮತ್ತಾಯ 13:41-44; 1 ಕೊರಿಂಥ 15:23-28). ಆತನು ಹಿಂದಿರುಗಿ ಬಂದಾಗ, ರಕ್ಷಿಸಲ್ಪಟ್ಟವರು — ಎಬ್ಬಿಸಲ್ಪಟ್ಟವರು ಮತ್ತು ಜೀವಿಸುತ್ತಿರುವವರು ಇಬ್ಬರೂ — ಆಕಾಶದಲ್ಲಿ ಆತನನ್ನು ಸಂಧಿಸುವರು ಮತ್ತು ಆತನೊಂದಿಗೆ ಪರಲೋಕದಲ್ಲಿ ಇರುವರು (1 ಥೆಸಲೋನಿಕ 4:15-17).

## "ಮೇಲಿರುವಂತವುಗಳ ಮೇಲೆ ಮನಸ್ಸಿಡಿರಿ, ಭೂಸಂಬಂಧವಾದವುಗಳ ಮೇಲೆ ಇಡಬೇಡಿರಿ" (3:2)

ಕೊಲೊಸ್ಸೆಯವರು ಯೇಸುವು ವಾಸಿಸುವಂಥ ಕಲುಷಿತಗೊಳ್ಳದ ಮಂಡಲದ ಮೇಲೆ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಬೇಕಾಗಿತ್ತು. ಅವರು ಭೂಸಂಬಂಧವಾದವುಗಳ ಮೇಲೆ ಮನಸ್ಸಿಡಬೇಕೋ ಅಥವಾ ಪರಲೋಕದ ಸಂಗತಿಗಳ ಮೇಲೆ ಮನಸ್ಸಿಡಬೇಕೋ ಎಂಬವುಗಳ ನಡುವೆ ಆಯ್ಕೆಯನ್ನು ಮಾಡಿಕೊಳ್ಳಬೇಕಿತ್ತು. ಪೌಲನು ಇಲ್ಲಿ ಸ್ಥಳಗಳಿಗಿಂತಲೂ ಅಧಿಕವಾಗಿ ಆ ಸ್ಥಳಗಳಲ್ಲಿನ ಜೀವನ ವಿಧಾನದ ಬಗ್ಗೆ ಪರಿಗಣನೆ ಮಾಡುತ್ತಿದ್ದಾನೆ. ವ್ಯತ್ಯಾಸವು **ಸಂಬಂಧವಾದವುಗಳಾದ** ಕ್ಷಣಿಕ, ಕ್ಷುಲ್ಲಕ, ಮತ್ತು ಪಾಪಭರಿತ ಕಾರ್ಯಗಳು ಹಾಗೂ **ಮೇಲಿರುವಂಥವುಗಳಾದ** ಪರಿಶುದ್ಧ, ಉಳಿಯುವಂಥ, ನಿತ್ಯವಾದ ಸಂಗತಿಗಳ ನಡುವಿನದ್ದಾಗಿರುತ್ತದೆ.

**ಮನಸ್ಸಿಡಿರಿ** ಎಂಬುದು φρονεῖτε (*phroneite*) ಎಂಬ ಒಂದು ಗ್ರೀಕ್ ವಿಧಿರೂಪದ ಪದವಾಗಿರುತ್ತದೆ. ಇಲ್ಲಿ ಮತ್ತು ಇತರ ಸನ್ನಿವೇಶಗಳಲ್ಲಿ (ರೋಮಾ 12:16; ಫಿಲಿಪ್ಪಿ 3:19), ಅರ್ಥವು "[ಯಾವದೋ ಒಂದನ್ನು] ಜಾಗ್ರತೆಯಿಂದ ಪರಿಗಣಿಸು, ಒಬ್ಬನ ಮನಸ್ಸನ್ನು ನೆಲೆಗೊಳಿಸು, ಅದರ ಉದ್ದೇಶವುಳ್ಳವನಾಗು" ಎಂದಾಗಿರುತ್ತದೆ.[5]

KJVಯ "ನಿಮ್ಮ ವಾತ್ಸಲ್ಯವನ್ನಿಡಿರಿ" ಎಂಬುದು ಭಾವಗಳ ಮೇಲೆ ಅತಿಯಾದ ಒತ್ತಡವನ್ನು ಹೇರುವದಾಗಿರುತ್ತದೆ. ಪೌಲನು ಕೊಲೊಸ್ಸೆಯವರು ಮನೋವೃತ್ತಿಯ ಬಗ್ಗೆ ಕಳಕಳಿ ಹೊಂದಿದ್ದನು. ಅವರು ಪರಲೋಕಕ್ಕೆ ಹೋಗುವದನ್ನ ಹುಡುಕುವದಕ್ಕಿಂತಲೂ ಅಧಿಕವಾದದ್ದನ್ನು ಮಾಡಬೇಕಿತ್ತು; ಅವರ ಯೋಚನೆಗಳ ಕೇಂದ್ರಸ್ಥಾನದಲ್ಲಿ ಪರಲೋಕದ ಭಕ್ತಿಸ್ವಭಾವವು ಇರಬೇಕಿತ್ತು. ಕೊಲೊಸ್ಸೆಯವರು "ಮೇಲಿರುವಂಥವುಗಳು" ಎಂದರೆ ಭೌತಿಕ ವಿಶ್ವವನ್ನು ಸೂಚಿಸುತ್ತಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವಂತೆ ಪೌಲನು ಅದರ ಜೊತೆಗೆ "ಅಲ್ಲಿ ಕ್ರಿಸ್ತನು . . . ಆಸನಾರೂಢನಾಗಿದ್ದಾನೆ" ಎಂದು ಸೇರ್ಪಡೆಗೊಳಿಸುತ್ತಾನೆ (3:1).

"ಭೂಮಿಯು" ಪಾಪದ ಆಳ್ವಿಕೆಯಿರುವ ಮಂಡಲವಾಗಿದ್ದರೆ, ಮೇಲಿರುವಂಥವುಗಳು ಪರಿಶುದ್ಧತೆಯು ಸರ್ವೋಚ್ಚವಾಗಿರುವ ಸ್ಥಳದಲ್ಲಿರುವಂಥವುಗಳಾಗಿವೆ. ನಮ್ಮ ಮುಖ್ಯ ಗಮನವು ಯಾವುದರ ಮೇಲೆ ಕೇಂದ್ರಿಕೃತವಾಗಿದೆ ಎಂಬುದರಿಂದ ಕ್ರೈಸ್ತರಾಗಿ ನಾವು ಹೇಗೆ ಜೀವಿಸುತ್ತೇವೆಂಬುದು ನಿರ್ಧರಿಸಲ್ಪಡುತ್ತದೆ. ನಾವು ಇಹಲೋಕದ ಸಂಗತಿಗಳ ಮೇಲೆಯೇ ಮುಖ್ಯ ಗಮನವನ್ನು ಇಟ್ಟಿರುವದಾದರೆ, ನಾವು ಭೂಲೋಕದ ಮನಸ್ಸುಳ್ಳವರಾಗಿ ಲೋಕದ ಜನರಂತೆಯೇ ಜೀವಿಸುವವರಾಗುತ್ತೇವೆ. ನಾವು ಪರಲೋಕದವುಗಳ ಮೇಲೆ ನಮ್ಮ ಮನಸ್ಸನ್ನು ಇಡುವದಾದರೆ, ನಾವು ದೈವಿಕ ಸ್ವರೂಪವನ್ನು ಧರಿಸಿಕೊಳ್ಳುವೆವು ಮತ್ತು ಈ ಜೀವನದ ಐಹಿಕ ಕಾರ್ಯಗಳ ನಿಯಂತ್ರಣದಲ್ಲಿರುವದಿಲ್ಲ. ಕೊಲೊಸ್ಸೆಯವರಿಗಿದ್ದ ರೀತಿಯಲ್ಲಿಯೇ ನಮ್ಮ ಕರ್ತವ್ಯವು, ನಮ್ಮ ಮನಸ್ಸುಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಆತ್ಮೀಕವಲ್ಲದ ಕಾರ್ಯಗಳನ್ನು ಹಾಗೂ ಈ ಜೀವನದ ಶೋಧನೆಯೊಡ್ಡುವ ಸಂಗತಿಗಳನ್ನು ಹೊರಗಿಟ್ಟು ಆತ್ಮೀಕವಾದದ್ದರೆಡೆಗೆ ನಮ್ಮ ಗಮನವನ್ನು ಸಮರ್ಪಿಸಿಕೊಳ್ಳುವದಕ್ಕೆ ಪ್ರಯತ್ನಿಸುವದೇ ಆಗಿರುತ್ತದೆ.

ನಮ್ಮ ಯೋಚನೆಯೊಳಗಿಂದ ಪಾಪದ ಕೃತ್ಯಗಳನ್ನು ಹೊರಗಿಡಬೇಕಾಗಿರುತ್ತದಾದರೂ, ಅದಷ್ಟೆ ಸಾಕಾಗುವದಿಲ್ಲ. ದುರಭ್ಯಾಸಗಳಿಂದ ಮುಕ್ತವಾಗಿರುವ ಮನಸ್ಸು ಅವಶ್ಯಕವಾಗಿ ಸದ್ಗುಣಗಳಿಂದ ತುಂಬಿರುತ್ತದೆ ಎಂದು ಹೇಳಲಾಗದು. ಆತ್ಮೀಕವಾಗಿ ಯೋಚಿಸುವಿಕೆ ಮತ್ತು ಜೀವಿಸುವಿಕೆಯ ಮೂಲಕ, ನಕಾರಾತ್ಮಕ ಆಚಾರಗಳನ್ನು ತೆಗೆದು ಹಾಕಬಹುದಾಗಿದೆ. ಕೆಟ್ಟದ್ದನ್ನು ನಿರ್ಮೂಲನೆ ಮಾಡುವದಕ್ಕಿರುವ ಮಾರ್ಗವೆಂದರೆ ಒಳ್ಳೇದನ್ನು ಯೋಚಿಸುವದೇ ಆಗಿರುತ್ತದೆ. ಪೌಲನು ಈ ಮೂಲತತ್ವದ ಬಗ್ಗೆ ರೋಮಾ 12:21; 13:14; 2 ಕೊರಿಂಥ 3:18; ಮತ್ತು ಗಲಾತ್ಯ 5:16ರಲ್ಲಿ ತಿಳಿಯ ಪಡಿಸುತ್ತಾನೆ.

ಫಿಲಿಪ್ಪಿಯವರಿಗೆ ಬರೆಯುವಾಗ, ಪೌಲನು ಭೂಸಂಬಂಧವಾದವುಗಳ ಮೇಲೆ ಮನಸ್ಸಿಡುವವರು ಶಿಲುಬೆಗೆ ವಿರೋಧಿಗಳು ಎಂಬದನ್ನು ತೋರಿಸಿ ಕೊಡುತ್ತಾನೆ (ಫಿಲಿಪ್ಪಿ 3:18, 19). ಅದೇ ಪತ್ರಿಕೆಯಲ್ಲಿ, ಅವರ ಮನಸ್ಸುಗಳನ್ನಿಡಬೇಕಾದ ಕೆಲವು ಸಕಾರಾತ್ಮಕ ವಿಷಯಗಳ ಪಟ್ಟಿಯನ್ನು ಕೊಡುತ್ತಾನೆ (ಫಿಲೆಮೋನ 4:8). ಯಾಕೋಬನು ಮೇಲಿನವುಗಳಿಗೆ ವಿರುದ್ಧ ಹೋಲಿಕೆ ಮಾಡುತ್ತಾ ಕೆಲವು ಭೂಸಂಬಂಧವಾದ ಹಾಗೂ ದೆವ್ವಗಳಿಗೆ ಸಂಬಂಧಪಟ್ಟ ಹಲವಾರು ಕಾರ್ಯಗಳ ಪಟ್ಟಿಯನ್ನು ಮಾಡುತ್ತಾನೆ (ಯಾಕೋಬ 3:14-18).

## "ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ" (3:3)

ಕೊಲೊಸ್ಸೆಯವರು ಸತ್ತವರು ಮತ್ತು ಬದುಕಿದವರು ಎರಡೂ ಆಗಿದ್ದರು (2:13, 20). ಅವರು **ಸತ್ತಿದ್ದರು** (ἀποθνήσκω, *apothnēskō*). ಈ ಕ್ರಿಯಾಪದವು ಒಂದು ಪೂರ್ತಿಗೊಂಡ ಹಾಗೂ ನಿರ್ದಿಷ್ಟವಾದ ಕ್ರಿಯೆಯನ್ನು ಸೂಚಿಸುತ್ತದೆ, ಆದರೆ ಬಹುಶಃ ಸಹೋದರರಲ್ಲಿ ಕೆಲವರು ತಾವು ಆತ್ಮೀಕವಾಗಿ ಸತ್ತಿದ್ದೇವೆಂಬುದನ್ನು ಗ್ರಹಿಸಿಕೊಳ್ಳಲು ಕಷ್ಟಪಡುತ್ತಿದ್ದರೆಂದು ಕಾಣುತ್ತದೆ. ಅವರ ಮನಸ್ಸಿನಲ್ಲಿ ಈ ಭಾವನೆಯನ್ನು ಆಳವಾಗಿ ಬೇರೂರುವಂತೆ ಮಾಡುವದಕ್ಕೆ ಮತ್ತು ಆವರ ಮರಣದ ಪರಿಣಾಮಗಳೇನೆಂಬುದನ್ನು ಒತ್ತಿ ಹೇಳುವದಕ್ಕೆ ಪೌಲನು ಅದನ್ನು ಪುನರಾವರ್ತಿಸುತ್ತಾನೆ. ಆತನು ಬಹುವಚನದೊಂದಿಗೆ

ಏಕವಚನವನ್ನು ("ನಿಮ್ಮ ಜೀವಗಳು" ಎಂಬುದರ ಬದಲಾಗಿ "ನಿಮ್ಮ [ಬಹುವಚನ] ಜೀವ") ಬಳಸುವಿಕೆಯು ಗ್ರೀಕ್.ನಲ್ಲಿ ರೂಢಿಯಲ್ಲಿದ್ದ ಬಳಕೆಯಾಗಿರುತ್ತದೆ.[6] ಈ ಕ್ರೈಸ್ತರು ಕ್ರಿಸ್ತನಲ್ಲಿ ಹೊಸ ಜೀವನದಲ್ಲಿ ಪಾಲುಗಾರರಾಗಿದ್ದರು.

ಅವರನ್ನು ಕ್ರಿಸ್ತನಿಂದ ಬೇರ್ಪಡಿಸಿದ್ದಂಥ ತಮ್ಮ ಹಳೆಯ ಜೀವನದ ಶೈಲಿಗಳ ದುಷ್ಕೃತ್ಯದ ಪಾಲಿಗೆ ಅವರು ಸತ್ತವರಾಗಿದ್ದಾಗ್ಯೂ (1:21), ಕೊಲೊಸ್ಸೆಯವರು ಬದುಕಿದವರಾಗಿ ಆತನೊಂದಿಗೆ ಹೊಸ ಸಂಬಂಧವನ್ನು ಹೊಂದಿದ್ದರು, ಆತನ ರಕ್ತದ ಮೂಲಕ ಸಂಧಾನಪಡಿಸಲ್ಪಟ್ಟಿದ್ದರು. William Hendriksen ಹೀಗೆ ಬರೆಯುತ್ತಾನೆ, "ಈಗಾಗಲೇ ವಿವರಿಸಿದ ಅರ್ಥದಲ್ಲಿ (2:11, 12ರ ಮೇಲಿನ ವಿವರಣೆಯನ್ನು ನೋಡಿರಿ) ಕೊಲೊಸ್ಸೆಯವರು ಸತ್ತು ಹೂಣಲ್ಪಟ್ಟಿದ್ದರು. ಇನ್ನು ಜೀವಿಸುವವರು ಅವರಾಗಿರಲಿಲ್ಲ ಆದರೆ ಕ್ರಿಸ್ತನೇ ಅವರಲ್ಲಿ ಜೀವಿಸುತ್ತಿದ್ದನು. ಅವರು ತಮ್ಮ ಪೂರ್ವಸ್ವಭಾವದ ಪಾಲಿಗೆ ಮತ್ತು ಪಾಪದಿಂದ ಆಳಲ್ಪಡುವ ಲೋಕದ ಪಾಲಿಗೆ ಸತ್ತಿದ್ದರು."[7]

ಅವರು ದೀಕ್ಷಾಸ್ನಾನದ ಕಾರ್ಯದಲ್ಲಿ ಸತ್ತಿದ್ದರು. ಈ ಸತ್ಯವು 2:12 ಪರೋಕ್ಷವಾಗಿಯೂ ರೋಮಾ 6ನೇ ಅಧ್ಯಾಯದಲ್ಲಿ ಸ್ಪಷ್ಟವಾಗಿಯೂ ತಿಳಿಸಲ್ಪಟ್ಟಿದೆ. "ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವದು ಹೇಗೆ?" ಎಂದು ಪೌಲನು ಕೇಳಿದನು (ವ 2). ಅದಕ್ಕೆ ಆತನು ಹೀಗೆ ಉತ್ತರಿಸುತ್ತಾನೆ, "ಹೀಗಿರಲಾಗಿ ನಾವು ದೀಕ್ಷಾಸ್ನಾನಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು" (ವ. 4). ಕೊಲೊಸ್ಸೆಯಲ್ಲಿದ್ದ ಕ್ರೈಸ್ತರು ಈಗ ಸತ್ತಿದ್ದರು, ಅದು ಅವರ ಪೂರ್ವ ಜೀವಿತದ ಪ್ರಾಪಂಚಿಕ ಕಾರ್ಯಗಳ ಪಾಲಿಗೆ ಆಗಿತ್ತು. ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮುಂಚೆ, ಅವರ ಜೀವಿಸುವ ವಿಧದ ವಿಷಯವಾಗಿ ದೇವರ ಪಾಲಿಗೆ ಸತ್ತವರಾಗಿದ್ದರು. ಈಗ ಅವರು ಯೇಸುವಿನ ಮರಣದೊಂದಿಗೆ ಗುರುತಿಸಿಕೊಂಡಿದ್ದ ಕಾರಣ ಪೂರ್ವಸ್ಥಿತಿಯ ಪಾಲಿಗೆ ಸತ್ತಿದ್ದರು. ಅವರು ಕ್ರಿಸ್ತನ ಸಹವಾಸದೊಂದಿಗೆ, ದೇವರಲ್ಲಿ ಪ್ರವೇಶಿಸಿದ್ದ ಹೊಸ ಜೀವನವು, ಅವರಿಗೆ ಜೀವನದ ಕೆಟ್ಟ ಬಿರುಗಾಳಿಗಳಿಂದ ತಪ್ಪಿಸಿಕೊಳ್ಳಲು ಒಂದು ಆಶ್ರಯ ಸ್ಥಳವಾಗಿತ್ತು.

**ಮರೆಯಾಗಿಟ್ಟದೆ** (κρύπτω, *kruptō*) ಎಂಬುದು ಒಂದು ನಿರಂತರವಾದ ಫಲಿತವುಳ್ಳಂಥ ಪೂರ್ಣಗೊಂಡ ಕ್ರಿಯೆಯೊಂದನ್ನು ಸೂಚಿಸುತ್ತದೆ. ಅವರ ಜೀವಿತಗಳು **ಕ್ರಿಸ್ತನೊಂದಿಗೆ ದೇವರಲ್ಲಿ** ಮರೆಯಾಗಿಡಲ್ಪಟ್ಟಿದ್ದವು ಮತ್ತು ಮರೆಯಾಗಿಡಲ್ಪಟ್ಟವುಗಳಾಗಿ *ಮುಂದುವರೆದಿದ್ದವು*. ಅವರು ಕ್ರಿಸ್ತನಲ್ಲಿದ್ದವರಾಗಿದ್ದ ನಿಮಿತ್ತವಾಗಿ (2 ಕೊರಿಂಥ 5:17) ಮತ್ತು ಆತನು ದೇವರಲ್ಲಿದ್ದದರ ನಿಮಿತ್ತವಾಗಿ (ಯೋಹಾನ 10:38; 14:10, 11, 20; 17:21) "ಕ್ರಿಸ್ತನೊಂದಿಗೆ ದೇವರಲ್ಲಿ" ಇದ್ದರು. ಒಂದು ಅರ್ಥದಲ್ಲಿ, ಅವರು ಕ್ರಿಸ್ತನನ್ನು ಧರಿಸಿಕೊಂಡದ್ದರಿಂದ ಲೋಕವು ಅವರನ್ನು ನೋಡಲಿಲ್ಲ (ಗಲಾತ್ಯ 3:27). ಖಂಡಿತವಾಗಿಯೂ, ಅವರು "ಮರೆಯಾಗಿದ್ದರು" ಎಂಬ ವಾಸ್ತವಾಂಶದ ಅರ್ಥವು ಲೋಕವು ಅವರನ್ನು ನೋಡುವದಕ್ಕೆ ಸಾಧ್ಯವಾಗಲಿಲ್ಲ ಎಂದಾಗಿರುವದಿಲ್ಲ; ಅವರು ಯಾವಾತನನ್ನು ಧರಿಸಿಕೊಂಡಿದ್ದರೋ ಆ ಕ್ರಿಸ್ತನನ್ನು ಲೋಕವು ಕಾಣುವದಾಗಿತ್ತು.

ಈ ಕ್ರೈಸ್ತರು "ಲೋಕಕ್ಕೆ ಬೆಳಕಾಗಿದ್ದರು. ಗುಡ್ಡದ ಮೇಲೆ ಕಟ್ಟಿರುವ ಊರು ಮರೆಯಾಗಿರಲಾರದು" (ಮತ್ತಾಯ 5:14). ಅವರು ಲೋಕದ ದೃಷ್ಟಿಯಿಂದ ಸಂಪೂರ್ಣ ಮರೆಯಾಗಿಡಲ್ಪಟ್ಟವರಾಗಿದ್ದಲ್ಲಿ ಲೋಕದ ಬೆಳಕಾಗಿರುವದಕ್ಕೆ ಸಾಧ್ಯವಿರಲಿಲ್ಲ. ಅವರು

ಹಬ್ಬದ ಉಡುಪು ಆಗಿರುವ ಕ್ರಿಸ್ತನಿಂದ ಧರಿಸಲ್ಪಟ್ಟವರಾಗಿರುವದನ್ನು ಲೋಕವು ನೋಡುವ ಅಗತ್ಯವಿತ್ತು (ಮತ್ತಾಯ 22:11, 12; ಗಲಾತ್ಯ 3:27). ಅವರು ಪೂರ್ತಿಯಾಗಿ ಹೊಂದಿಸಲ್ಪಟ್ಟಿದ್ದಂಥ ಬೆಳಕು ಆತನೇ ಆಗಿದ್ದನು (ಯೋಹಾನ 8:12). ಅವರು ಇನ್ನು ಮೇಲೆ ಕತ್ತಲೆಯವರಾಗಿರಲಿಲ್ಲ ಆದರೆ ಕರ್ತನಲ್ಲಿ ಬೆಳಕಾಗಿದ್ದರು (ಎಫೆಸ 5:8), ಲೋಕದಲ್ಲಿ ಹೊಳೆಯುವ ಜ್ಯೋತಿರ್ಮಂಡಲಗಳಾಗಿದ್ದರು (ಫಿಲಿಪ್ಪಿ 2:15).

"ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಡಲ್ಪಟ್ಟವರಾಗಿ," ಅವರು ದೇವರ ಸುರಕ್ಷತೆಯುಳ್ಳ ಪೋಷಣೆಯಲ್ಲಿದ್ದರು (1 ಕೊರಿಂಥ 10:13), ಲೋಕದ ವ್ಯಾಮೋಹಕ್ಕೊಳಪಡಿಸುವ ಆಚಾರಗಳಿಗೆ ಮರೆಯಾಗಿದ್ದರು. ದೇವರು ಒಂದು ಅಡಗಿಕೊಳ್ಳುವ ಸ್ಥಳವೆಂಬ (ಕೀರ್ತನೆ 17:8; 31:20; 64:2), ತನ್ನ ಜನರಿಗೆ ಆಶ್ರಯಸ್ಥಳವೆಂಬ ಯೋಚನೆಯನ್ನು ಹಳೆಯ ಒಡಂಬಡಿಕೆಯು ಮುಂದಿಡುತ್ತದೆ (ಕೀರ್ತನೆ 61:2, 3). ಈ ಆಶ್ಚರ್ಯಸ್ಥಾನದ ಸುರಕ್ಷತೆಯ ನೆಲೆಯೊಳಗೆ, ಅವರು ಪಾಪದ ಹುಯ್ಯಲಿಡುವ ಬಿರುಗಾಳಿಗಳನ್ನು ಮತ್ತು ಲೋಕದ ಹಾನಿಗಳನ್ನು ದಾಟಿ ಸುರಕ್ಷಿತವಾಗಿ ಉಳಿದಿದ್ದರು. ಅವರು ಅವರನ್ನು ಕಾಪಾಡುವವನಾದ ಕ್ರಿಸ್ತನಲ್ಲಿದ್ದರು, ಮತ್ತು ಅವರ ಆಶ್ರಯಸ್ಥಾನವಾಗಿದ್ದ ದೇವರಲ್ಲಿದ್ದರು.

ಕೊಲೊಸ್ಸೆಯವರು ತಮ್ಮ ಅಡಗುಸ್ಥಳದಲ್ಲಿ ಸುರಕ್ಷಿತವಾಗಿ ನೆಲೆಗೊಂಡಿರುವ ತನಕ, ಸೈತಾನನ ಒತ್ತಡ ಹೇರುವ ಶಕ್ತಿಗಳು ಅವರನ್ನು ಪರಾಜಯಗೊಳಿಸಿ ಸೆರೆಯಾಳುಗಳನ್ನಾಗಿ ಇಟ್ಟುಕೊಳ್ಳುವದಕ್ಕೆ ಸಾಧ್ಯವಿರಲಿಲ್ಲ (1 ಯೋಹಾನ 3:6, 9; 1 ಪೇತ್ರ 1:23ರೊಂದಿಗೆ ಹೋಲಿಸಿರಿ). ಯೇಸು ದುಷ್ಟಶಕ್ತಿಗಳ ಮೇಲೆ ಜಯಗೊಂಡನಾದ್ದರಿಂದ (ಕೊಲೊಸ್ಸೆ 2:15), ಆತನು ಅವರಿಗೆ ಜಯಗೊಳ್ಳಲು ಸಹಾಯ ಮಾಡಲು ಶಕ್ತನಾಗಿದ್ದನು (1 ಯೋಹಾನ 4:4). ಅವರು ಜಯವೀರನೊಂದಿಗೆ ಸುರಕ್ಷಿತವಾಗಿ ನೆಲೆಗೊಳ್ಳುವದಾದರೆ, ಅವರು ಜಯಶಾಲಿಗಳಾಗಲಿದ್ದರು. ಅವರ ಅಡಗುಸ್ಥಾನವಾದ ಯೇಸುವಿನಿಂದ ದೂರ ಹೋಗುವಂತೆ ವಂಚಿಸಿ ಅವರನ್ನು ವಶಪಡಿಸಿಕೊಳ್ಳುವಂತೆ ಯಾವದಕ್ಕೂ ಯಾರಿಗೂ ಅವಕಾಶವನ್ನು ಕೊಡಬಾರದಿತ್ತು (ಕೊಲೊಸ್ಸೆ 2:8).

ಪೌಲನು "ಕ್ರಿಸ್ತನೊಂದಿಗೆ" (σὺν . . . Χριστῷ, *sun . . . Christō*) ಎಂಬುದನ್ನು ಈ ಅರ್ಥದಲ್ಲಿ ಇಲ್ಲಿ ಮಾತ್ರವೇ ಬಳಸಿದನು. ಆತನು "ಕ್ರಿಸ್ತನೊಂದಿಗೆ" ಎಂಬುದಕ್ಕಿಂತಲೂ ಅಧಿಕವಾಗಿ "ಕ್ರಿಸ್ತನಲ್ಲಿ" ಎಂಬುದನ್ನು ಬಳಸಿದನು. ದೀಕ್ಷಾಸ್ನಾನದ ವೇಳೆಯಲ್ಲಿ ಕ್ರೈಸ್ತರು ಪ್ರವೇಶಿಸುವ ಆತ್ಮೀಕ ಮಂಡಲವು "ಕ್ರಿಸ್ತನಲ್ಲಿ" ಆಗಿರಬೇಕು. ಅದೇ ಸ್ಥಿತಿಯನ್ನು "ದೇವರಲ್ಲಿ" ಎಂಬುದಾಗಿ ವರ್ಣಿಸುವದು ಯಾವ ಸಮಸ್ಯೆಯನ್ನು ಒಡ್ಡುವದಿಲ್ಲ ಯಾಕೆಂದರೆ ಕ್ರಿಸ್ತನು "ದೇವರಲ್ಲಿ" ಇದ್ದಾನೆ (ಯೋಹಾನ 10:38; 14:11, 20; 17:21); "ಕ್ರಿಸ್ತನಲ್ಲಿ" ಇರುವವರು, ಒಂದು ಆತ್ಮೀಕ ಅರ್ಥದಲ್ಲಿ "ದೇವರಲ್ಲಿ" ಸಹ ಇರುವವರಾಗಿದ್ದಾರೆ.

## "ನಮಗೆ ಜೀವವಾಗಿರುವ ಕ್ರಿಸ್ತನು" (3:4)

3:1-4ರಲ್ಲಿ ಪೌಲನು ಸರ್ವನಾಮವೊಂದನ್ನು ಬಳಸುವದರ ಬದಲಾಗಿ **ಕ್ರಿಸ್ತನು** ಎಂಬ ಬಿರುದನ್ನು ನಾಲ್ಕು ಸಾರಿ ಬಳಸಿದನು. ಈ ಅಸಹಜವಾದ ಪುನರಾವರ್ತನೆಯು ಮಹತ್ವಪೂರ್ಣವಾಗಿರುತ್ತದೆ. ಕೊಲೊಸ್ಸೆಯವರ ಜೀವಿತಗಳು ಕ್ರಿಸ್ತನೊಂದಿಗೆ ಮರೆಯಾಗಿಡಲ್ಪಟ್ಟಿದ್ದವಾದ್ದರಿಂದ, ಆತನು ಮಹಿಮೆಯೊಡನೆ ಪ್ರತ್ಯಕ್ಷನಾಗುವಾಗ ಅವರು

ಆತನೊಂದಿಗಿರುವರು ಎಂಬದಾಗಿ ಪೌಲನು ಹೇಳುತ್ತಾನೆ (ವ. 4). ಈ ವಿಧದಲ್ಲಿ, ಪೌಲನು ಪ್ರಸ್ತುತ ಜೀವನವನ್ನು ಭವಿಷ್ಯದ ಜೀವನದೊಂದಿಗೆ ಸಂಬಂಧಗೊಳಿಸುತ್ತಾನೆ. ಈಗ ಕ್ರಿಸ್ತನೊಂದಿಗಿರುವವರು (ವ. 4) ಆತನು ಹಿಂದಿರುಗಿ ಬಂದಾಗ ಆತನೊಂದಿಗೆ ಪ್ರತ್ಯಕ್ಷಗೊಳಿಸಲ್ಪಡುವರು (ವ. 4). ಈ ಕ್ಷಣಿಕ ಲೋಕವು ಅಂತ್ಯಗೊಂಡಾಗ, ಅವರು ಮಹಿಮೆಗೊಂಡ ಕ್ರಿಸ್ತನ ಬರೋಣದಲ್ಲಿ ಆತನೊಂದಿಗಿರುವರು. ವಚನ 4b ಮಾತ್ರವೇ ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ ಯೇಸುವಿನ ಎರಡನೆಯ ಬರೋಣದ ಕುರಿತು ಮಾತಾಡುತ್ತದೆ.

ಕೊಲೊಸ್ಸೆಯವರು ಜೀವಿತಗಳು ಕ್ರಿಸ್ತನೊಂದಿಗೆ ಮರೆಯಾಗಿಡಲ್ಪಟ್ಟಿದ್ದಕ್ಕೆ ಇನ್ನೊಂದು ಕಾರಣವೆಂದರೆ ಆತನು **ನಮಗೆ ಜೀವವಾಗಿರುವ ಕ್ರಿಸ್ತನು:** ಜೀವದ ಮೂಲ, ಕೇಂದ್ರಬಿಂದು, ಮತ್ತು ಬುಗ್ಗೆಯಾಗಿದ್ದಾನೆ (1 ಯೋಹಾನ 5:12).[8] ಜೀವವು ಆತನಿಂದ ಬರುವದು ಮತ್ತು ಆತನೊಂದಿಗೆ ಹಂಚಿಕೊಂಡದ್ದು ಮಾತ್ರವಲ್ಲದೆ, ಆತನೇ ಕ್ರೈಸ್ತರಿಗೆ ಜೀವವಾಗಿದ್ದಾನೆ. ಯೇಸು ದ್ರಾಕ್ಷಾಬಳ್ಳಿಯಾಗಿದ್ದಾನೆ, ಮತ್ತು ಕ್ರೈಸ್ತರು ಕೊಂಬೆಗಳು (ಯೋಹಾನ 15:5). ಕೊಂಬೆಗಳು ತಾವು ದ್ರಾಕ್ಷಾ ಬಳ್ಳಿಯೊಂದಿಗೆ ಹೊಂದಿರುವ ಸಂಬಂಧದ ನಿಮಿತ್ತದಿಂದ ಜೀವವನ್ನು ಹೊಂದಿರುತ್ತವೆ. ಯೇಸುವಿನಲ್ಲಿ ನೆಲೆಗೊಳ್ಳದ ಪ್ರತಿಯೊಂದು ಕೊಂಬೆಯು ಕಡಿದು ಹಾಕಲ್ಪಡುವದು ಮತ್ತು ಒಣಗಿ ಹೋಗುವದು. ಬಳಿಕ, ಅದು ಇನ್ನು ಮೇಲೆ ಜೀವವಿಲ್ಲದ್ದಾಗಿರುವದರಿಂದ, ಅದು ಸುಟ್ಟು ಹಾಕಲ್ಪಡುವದು (ಯೋಹಾನ 15:6).

"ಜೀವ" ಎಂಬುದನ್ನು ಪರಿವರ್ತಕಗೊಳಿಸುವ ಗ್ರೀಕ್ ಪದವು "ನಮ್ಮ" ಅಥವಾ "ನಿಮ್ಮ" ಎಂಬ ಎರಡರಲ್ಲಿ ಒಂದು ಆಗಿರಬಹುದಾಗಿದೆ. "ನಮ್ಮ," *hēmon*, ಎಂಬುದು ಈ ಕೆಳಗಿನ ತರ್ಜುಮೆಗಳೊಳಗೆ ವಾಕ್ಯದಲ್ಲಿ ಅಥವಾ ಪಾರ್ಶ್ವ ಟಿಪ್ಪಣಿಗಳಲ್ಲಿ ಕಾಣಿಸಿಕೊಳ್ಳುತ್ತದೆ: KJV, ASV, RSV, NAB, NEB, NKJV, ಮತ್ತು NRSV. ಅದರ ಬೇರೆ ರೂಪವಾದ ὑμῶν (*humōn*, "ನಿಮ್ಮ") ಎಂಬುದು ಮನತಟ್ಟುವಷ್ಟು ಸಂಖ್ಯೆಯ ಹಸ್ತಪ್ರತಿಗಳಲ್ಲಿ ಕೊಡಲ್ಪಟ್ಟಿರುತ್ತದೆ. ಇದು ಗ್ರೀಕ್ ಹೊಸ ಒಡಂಬಡಿಕೆಯಲ್ಲಿ ಅಳವಡಿಸಿಕೊಳ್ಳಲ್ಪಟ್ಟಿರುವ ವಾಚನವಾಗಿರುತ್ತದೆ. "ನಿಮ್ಮ" ಎಂಬ ಪದವು NIV, NRSV, ಮತ್ತು TEV ತರ್ಜುಮೆಗಳಲ್ಲಿ, ಅಲ್ಲದೆ ASVಯ ಪಾರ್ಶ್ವಟಿಪ್ಪಣಿಯಲ್ಲಿ ಸಹ ಕಾಣಿಸಿಕೊಳ್ಳುತ್ತದೆ. ವಾಕ್ಯಭಾಗಗಳಲ್ಲಿರುವ ಪುರಾವೆಯು ಇದು "ನಮ್ಮ" ಅಥವಾ "ನಿಮ್ಮ" ಎಂಬವುಗಳಲ್ಲಿ ಯಾವದು ಮೂಲ ವಾಚನ ಎಂದು ಖಚಿತವಾಗಿ ತಿಳಿಯುವದನ್ನು ಕಷ್ಟಕರವಾಗಿಸುತ್ತದೆ. ಅಂತ್ಯದಲ್ಲಿ, ವ್ಯತ್ಯಾಸವು ಚಿಕ್ಕದಾಗಿದೆ. ಕ್ರಿಸ್ತನನ್ನು ತಮ್ಮ ಜೀವವಾಗಿ ಹೊಂದಿದವರೊಳಗೆ ತನ್ನನ್ನು ಸೇರ್ಪಡೆಗೊಳಿಸುವ ವೇಳೆ ಪೌಲನು "ನಮ್ಮ" ಎಂಬುದಾಗಿ ಬಳಸುತ್ತಾನೆ. ಆತನು 2:13ರಲ್ಲಿ ಮತ್ತು ಗಲಾತ್ಯ 3:25, 26ರಲ್ಲಿ "ನೀವು" ಎಂಬದರಿಂದ ಬದಲಾಗಿ "ನಮ್ಮ" ಎಂದು ಬಳಸುತ್ತಾನೆ, ಇದು ಪೌಲನಿಗೆ ಸಹಜವಾದದ್ದೇನೂ ಆಗಿರಲಿಲ್ಲ ಎಂಬುದನ್ನು ತೋರಿಸುತ್ತದೆ.

## "ಪ್ರತ್ಯಕ್ಷನಾಗುವಾಗ ನೀವು ಸಹ ಆತನ ಜೊತೆಯಲ್ಲಿ ಪ್ರಭಾವದಿಂದ ಕೂಡಿದವರಾಗಿ ಪ್ರತ್ಯಕ್ಷರಾಗುವಿರಿ" (3:4)

ಅಪೊಸ್ತಲನು ಕೊಲೊಸ್ಸೆಯವರಿಗೆ ಕ್ರಿಸ್ತನು **ಪ್ರತ್ಯಕ್ಷನಾಗುವಾಗ** ಅವರು ಸಹ ಪ್ರಭಾವದೊಡನೆ ಕ್ರಿಸ್ತನೊಂದಿಗೆ ಪ್ರತ್ಯಕ್ಷರಾಗುವರು ಎಂದು ಹೇಳುತ್ತಾನೆ. ಗ್ರೀಕ್‌ನ

φανερόω (*phaneroō*) ಎಂಬ ಪದವು ಯೇಸುವಿನ ಎರಡನೆಯ ಬರೋಣವನ್ನು ಸೂಚಿಸಲು (1 ಪೇತ್ರ 5:4; 1 ಯೋಹಾನ 2:28; 3:2), ಪ್ರತ್ಯಕ್ಷಗೊಳ್ಳುವಿಕೆಯೊಂದನ್ನು ಸೂಚಿಸಲು (ಮಾರ್ಕ 16:12, 14), ಮತ್ತು ಮರೆಯಾಗಿದ್ದೊಂದನ್ನು ಅಥವಾ ಬಯಲುಗೊಳಿಸತಕ್ಕದ್ದೊಂದನ್ನು ಪ್ರಕಟಗೊಳಿಸುವದರ ಕುರಿತಾಗಿ (ಮಾರ್ಕ 4:22; ಯೋಹಾನ 1:31) ಬಳಸಲ್ಪಟ್ಟಿದೆ. ಅಲ್ಲದೆ ಈ ಪದವು ದೇವರು ಗತಕಾಲದಲ್ಲಿ ಮರೆಯಾಗಿಡಲ್ಪಟ್ಟಿದ್ದನ್ನು ಹೊಸ ಒಡಂಬಡಿಕೆಯ ಕಾಲದಲ್ಲಿ ಪ್ರಕಟಗೊಳಿಸಿದನೆಂದು ಸೂಚಿಸುವದಕ್ಕೆ ಸಹ ಬಳಸಲ್ಪಟ್ಟಿರುತ್ತದೆ (ಕೊಲೊಸ್ಸೆ 1:26).

ಪೌಲನು **ಆತನ ಜೊತೆಯಲ್ಲಿ** ಎಂಬುದನ್ನು ಯೇಸುವಿನೊಂದಿಗಿರುವ ಈಗಿನ ಹಾಗೂ ಭವಿಷ್ಯದ ಸಂಬಂಧವನ್ನು ಸಹ ಸೂಚಿಸಲು ಬಳಸುತ್ತಾನೆ. ಕ್ರೈಸ್ತರು ಯೇಸುವಿನೊಂದಿಗೆ ಹೊಂದಿರುವ ಈಗಿನ ಜೀವಿತವು ಪರಲೋಕದ ಮಂಡಲದಲ್ಲಿ ಮುಂದುವರೆಯುವದಾಗಿದೆ (ಫಿಲಿಪ್ಪಿ 1:23; 1 ಥೆಸಲೋನಿಕ 4:17). ಕ್ರೈಸ್ತರು "ಕ್ರಿಸ್ತನೊಂದಿಗೆ ಬಾಧ್ಯರು. ಹೇಗಂದರೆ ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು" ಎಂದು ಪೌಲನು ಬರೆಯುತ್ತಾನೆ (ರೋಮಾ 8:17). "ಜೊತೆಯಲ್ಲಿ" (σύν, *sun*) ಎಂಬುದು ಕ್ರಿಸ್ತನೊಂದಿಗೆ ಇರುವದನ್ನು ಸೂಚಿಸುವ ವೇಳೆ ಒಂದು ಸಂಯುಕ್ತ ಕ್ರಿಯಾಪದದಲ್ಲಿ ಬಳಸಲ್ಪಟ್ಟಾಗ, ದೀಕ್ಷಾಸ್ನಾನದ ಮೂಲಕವಾಗಿ ಹೊಸ ಜೀವನದಲ್ಲಿ ಪಾಲುಗಾರರಾಗುವದು ಎಂಬ ಅರ್ಥವು ಕೊಡಲ್ಪಡುತ್ತದೆ (ರೋಮಾ 6:4, 5; ಕೊಲೊಸ್ಸೆ 2:12, 13; 3:1).

ಕೊಲೊಸ್ಸೆಯವರು ಯೇಸುವಿನ ಜೊತೆಯಲ್ಲಿ ಈ ಕೆಳಗಿನವುಗಳಲ್ಲಿ ಪಾಲುಗಾರರಾಗಿದ್ದರು ಅಥವಾ ಪಾಲುಗಾರರಾಗಲಿದ್ದರು:

ಅವರು ಆತನೊಂದಿಗೆ ಹೂಣಲ್ಪಟ್ಟಿದ್ದರು, ಎಬ್ಬಿಸಲ್ಪಟ್ಟಿದ್ದರು, ಮತ್ತು ಬದುಕಿಸಲ್ಪಟ್ಟಿದ್ದರು (2:12, 13; 3:1).
ಅವರು ಆತನೊಂದಿಗೆ ಪ್ರಾಪಂಚಿಕ ಬಾಲಬೋಧೆಯ ಪಾಲಿಗೆ ಸತ್ತವರಾಗಿದ್ದರು (2:20).
ಅದರ ಫಲಿತವಾಗಿ, ಅವರು ಆತನೊಂದಿಗೆ ದೇವರಲ್ಲಿ ಮರೆಯಾಗಿಡಲ್ಪಟ್ಟಿದ್ದರು (3:3).
ಅವರು ಆತನೊಂದಿಗೆ ಪ್ರಭಾವದಿಂದ ಕೂಡಿದವರಾಗಿ ಪ್ರತ್ಯಕ್ಷರಾಗುವರು (3:4).

ಪೌಲನು ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಈ ಯೋಚನೆಯನ್ನು ಇದೇ ಕ್ರಮಾನುಸಾರದಲ್ಲಿ ತಿಳಿಸುತ್ತಾನೆ. ಆ ಕ್ರೈಸ್ತರು, ದೀಕ್ಷಾಸ್ನಾನದಲ್ಲಿ, ಆತನೊಂದಿಗೆ ಹೂಣಲ್ಪಟ್ಟಿದ್ದರು, ಆತನ ಮರಣದಲ್ಲಿ ಆತನೊಂದಿಗೆ ಐಕ್ಯಗೊಂಡಿದ್ದರು, ಮತ್ತು ಆತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿದ್ದರು. ಹೀಗೆ ಆತನೊಂದಿಗೆ ಸತ್ತವರಾಗಿದ್ದ ಅವರಿಗೆ, ಆತನೊಂದಿಗೆ ಜೀವಿಸುವ ನಿರೀಕ್ಷೆಯು ಇತ್ತು (6:4-8).

"ಆತನ ಜೊತೆಯಲ್ಲಿ" ಎಂಬುದು ಬೇರೊಂದು ಕಡೆಯಲ್ಲಿ ಪೌಲನು ಉದ್ದೇಶ ಹೊಂದಿದ್ದ ಅದೇ ಅರ್ಥವನ್ನು ಹೊಂದಿರುತ್ತದೆ: "ಕರ್ತನಾದ ಯೇಸುವನ್ನು ಎಬ್ಬಿಸಿದಾತನು ನಮ್ಮನ್ನು ಸಹ ಯೇಸುವಿನೊಂದಿಗೆ ಎಬ್ಬಿಸಿ ನಿಮ್ಮ ಜೊತೆಯಲ್ಲಿ ತನ್ನ ಮುಂದೆ ನಿಲ್ಲಿಸುವನು"

(2 ಕೊರಿಂಥ 4:14; ನೋಡಿರಿ ರೋಮಾ 8:32). ಯೇಸುವನ್ನು ಎಬ್ಬಿಸಿದ ದೇವರು ಆತನೊಂದಿಗೆ ನಮ್ಮನ್ನು ಸಹ ಎಬ್ಬಿಸುವನು. ಅಪೊಸ್ತಲನು 1 ಥೆಸಲೋನಿಕ 4:14ರಲ್ಲಿ ಹೀಗೆ ಬರೆದನು, "ಯೇಸು ಸತ್ತು ಜೀವಿತನಾಗಿ ಎದ್ದನೆಂದು ನಾವು ನಂಬಿದ ಮೇಲೆ ಅದರಂತೆ ಯೇಸುವಿನಲ್ಲಿದ್ದುಕೊಂಡು ನಿದ್ರೆಹೋಗುವವರನ್ನು ಸಹ ದೇವರು ಆತನೊಡನೆ ಕರೆದುಕೊಂಡು ಬರುವನೆಂದು ನಂಬಬೇಕಲ್ಲವೇ." ಈ ವಚನದ ವಿಷಯವಾಗಿ, J. W. McGarvey ಹೀಗೆ ವ್ಯಾಖ್ಯಾನಿಸುತ್ತಾನೆ,

> "ಆತನೊಡನೆ" ಎಂಬುದು ಇಲ್ಲಿ ಯೇಸುವು ಪ್ರತ್ಯೇಕಗೊಂಡ ಆತ್ಮಗಳನ್ನು *ಪರಲೋಕ*ದಿಂದ ಪುನರುತ್ಥಾನಕ್ಕೆ ಕರೆ ತರುವನೆಂಬ ಅರ್ಥವಾಗಿರುವದಿಲ್ಲ, ಆದರೆ ಯೇಸುವನ್ನು ಸಮಾಧಿಯಿಂದ ಎಬ್ಬಿಸಿದ ದೇವರು, ಯೇಸುವಿನೊಂದಿಗೆ ಆತ್ಮೀಕವಾಗಿ ಐಕ್ಯಗೊಂಡು ಸಮಾಧಿಯನ್ನು ಸೇರಿದವರನ್ನು ಸಹ ದೇವರು ಯೇಸುವಿನ ರೀತಿಯಲ್ಲಿಯೇ *ಸಮಾಧಿ*ಯಿಂದ ಎಬ್ಬಿಸುವನು ಎಂಬರ್ಥವಾಗಿರುತ್ತದೆ.[9]

ಸಮಾಧಿಯಲ್ಲಿರುವ ಒಳ್ಳೆಯವರಾಗಲಿ ಮತ್ತು ಕೆಟ್ಟವರಾಗಲಿ, ಎಲ್ಲರೂ ಏಕಕಾಲದಲ್ಲಿ ಎಬ್ಬಿಸಲ್ಪಡುವರು (ಯೋಹಾನ 5:28). ಇದು ಕಡೇ ದಿನದಲ್ಲಿ ಸಂಭವಿಸುವದು (ಯೋಹಾನ 6:39, 40, 44, 54), ಆಗ ಎಲ್ಲರಿಗೂ ನ್ಯಾಯತೀರ್ಪು ಆಗುವದು (ಯೋಹಾನ 12:48).[10] ಸೂರ್ಯನು ಪ್ರಕಾಶಿಸುವವ ವರೆಗೂ ಭೂಮಿಯು ಸೂರ್ಯನನ್ನು ಸುತ್ತುತ್ತಿರುವ ಮತ್ತು ಅದರ ಅಕ್ಷರೇಖೆಯಲ್ಲಿ ತಿರುಗುತ್ತಿರುವ ವರೆಗೂ ದಿನಗಳು ಮುಂದುವರೆಯುವವು. ಯೇಸು ಹಿಂದಿರುಗಿ ಬಂದಾಗ, ವಿಶ್ವವು ಗತಿಸಿ ಹೋಗುವದು ಮತ್ತು ಆಗ ಇನ್ನೆಂದಿಗೂ ದಿನಗಳು ಇರುವದಿಲ್ಲ. ಪುನರುತ್ಥಾನವು ವಿಶ್ವವು ಅಸ್ತಿತ್ವದಲ್ಲಿರುವ ಅದರ "ಕಡೇ ದಿನ" ದಲ್ಲಿ ಸಂಭವಿಸುವದು. ನ್ಯಾಯತೀರ್ಪು ಹೊಂದುವದಕ್ಕಾಗಿ ಸತ್ತವರು ಎಬ್ಬಿಸಲ್ಪಟ್ಟ ಬಳಿಕ, ಭೂಮ್ಯಾಕಾಶಗಳು ಅಳಿದು ಹೋಗುವವು (2 ಪೇತ್ರ 3:10; ಪ್ರಕಟನೆ 20:11).

ಕೊಲೊಸ್ಸೆಯವರು ಯೇಸುವಿನಿಂದ ಪುನರುತ್ಥಾನಗೊಳಿಸಲ್ಪಡುವದನ್ನು ಮತ್ತು ಆತನ ಬರೋಣದ ವೇಳೆ [ಆತನ] **ಪ್ರಭಾವದಿಂದ ಕೂಡಿದವರಾಗಿ** ಆತನ ಜೊತೆಯಲ್ಲಿರುವದನ್ನು ನಿರೀಕ್ಷಿಸುವದಕ್ಕೆ ಶಕ್ತರಾಗಿದ್ದರು. ಯೋಹಾನನು ಹೀಗೆ ಬರೆಯುತ್ತಾನೆ, "ಮುಂದೆ ನಾವು ಏನಾಗುವೆವೋ ಅದು ಇನ್ನೂ ಪ್ರತ್ಯಕ್ಷವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು" (1 ಯೋಹಾನ 3:2). ಕ್ರಿಸ್ತನು "ದೀನಾವಸ್ಥೆಯುಳ್ಳ ನಮ್ಮ ದೇಹವನ್ನು ರೂಪಾಂತರಪಡಿಸಿ ಪ್ರಭಾವವುಳ್ಳ ತನ್ನ ದೇಹದ ಸಾರೂಪ್ಯವಾಗುವಂತೆ ಮಾಡುವನು" ಎಂದು ಪೌಲನು ಬರೆಯುತ್ತಾನೆ (ಫಿಲಿಪ್ಪಿ 3:21).

ಮರಣದ ನಂತರ, ದೇಹವು ಭೂಮಿಯಲ್ಲಿ ಉಳಿಯುತ್ತದೆ ಮತ್ತು ಆತ್ಮವು ಬೇರ್ಪಟ್ಟು ಪಾತಾಳಕ್ಕೆ ಹೋಗುತ್ತದೆ (ಆದಿಕಾಂಡ 35:18; ಅಪೊಸ್ತಲರ ಕೃತ್ಯಗಳು 2:27, 31). ಯೇಸು ಪುನಃ ಬರುವ ವೇಳೆ, ಆತನು ಸತ್ತವರೆಲ್ಲರ ದೇಹಗಳನ್ನು ಪುನರುತ್ಥಾನಗೊಳಿಸುವನು (ಯೋಹಾನ 5:28, 29) ಮತ್ತು ಪರಿವರ್ತನೆಗೊಂಡ ದೇಹಗಳನ್ನು ಅವುಗಳ ಆತ್ಮಗಳೊಂದಿಗೆ ಪುನಃ ಒಂದುಗೂಡಿಸುವನು, ಆ ಆತ್ಮಗಳನ್ನು ಆ ಸಮಯದಲ್ಲಿ ಪಾತಾಳವು ಒಪ್ಪಿಸಿ ಬಿಡುವದು (ಪ್ರಕಟನೆ 20:11-13). ಅನಂತರ, ಯೇಸು ತನ್ನ ಸಿಂಹಾಸನದ ಮೇಲೆ ಕೂಳಿತುಕೊಳ್ಳುವನು, ಮತ್ತು ಈಗಿನ ವಿಶ್ವವು ಅಂತ್ಯಗೊಳ್ಳುವದು (2 ಪೇತ್ರ 3:10; ಪ್ರಕಟನೆ 20:11). ಇದಾದ ಮೇಲೆ, ಯೇಸು ಎಲ್ಲಾ ಮನುಷ್ಯರಿಗೆ –

ಪುನರುತ್ಥಾನಗೊಂಡ ಮತ್ತು ಇನ್ನೂ ಜೀವಿಸುತ್ತಿರುವ ಎಲ್ಲರಿಗೂ – ನ್ಯಾಯತೀರಿಸುವನು.[11] ನಂತರ, ಯೇಸು ರಾಜ್ಯವನ್ನು ಪುನಃ ತಂದೆಯ ವಶಕ್ಕೆ ಒಪ್ಪಿಸುವನು (1 ಕೊರಿಂಥ 15:24-27).

"ನೀವು ಸಹ ಆತನ ಜೊತೆಯಲ್ಲಿ ಪ್ರಭಾವದಿಂದ ಕೂಡಿದವರಾಗಿ ಪ್ರತ್ಯಕ್ಷರಾಗಿವಿರಿ" ಎಂಬ ಹೇಳಿಕೆಯು ತಾವು ಕ್ರಿಸ್ತನಲ್ಲಿ ಹೊಸ ಜೀವನವನ್ನು ಜೀವಿಸುವದಕ್ಕೆ ಪಡುತ್ತಿರುವ ಪ್ರಯಾಸಕ್ಕೆ ಆತನ ಜೊತೆಯಲ್ಲಿ ಪ್ರಭಾವದಿಂದ ತುಂಬಿಸಲ್ಪಡುವ ಮೂಲಕ ಪ್ರತಿಫಲವನ್ನು ಹೊಂದಿಕೊಳ್ಳಲಿದ್ದಾರೆಂಬ ಭರವಸೆಯನ್ನು ಕೊಲೊಸ್ಸೆಯವರಿಗೆ ಒದಗಿಸುತ್ತದೆ. ಈ ಪ್ರಭಾವದಿಂದ ತುಂಬಿಸಲ್ಪಡುವ ಭರವಸೆಯು ಅವರು ಜೀವನದ ಆತ್ಮೀಕ ವಿನಾಶತೆಗಳಿಗೆ ತಪ್ಪಿಸಿಕೊಂಡು ಕ್ರಿಸ್ತನಲ್ಲಿ ಮರೆಯಾಗಿಡಲ್ಪಟ್ಟವರಾಗಿ ಉಳಿದುಕೊಳ್ಳುವದರ ಮೇಲೆ ಅವಲಂಭನೆಗೊಂಡಿತ್ತು. ಅವರು ಭೂಮಿಯ ಮೇಲೆ ಪರದೇಶಸ್ಥರಾಗಿದ್ದರು; ಆದರೆ ಅವರು ತಮ್ಮ ಆತ್ಮೀಕ ಸ್ವದೇಶದಲ್ಲಿ ಯೇಸುವಿನ ಸಂಗಡ ಪರಲೋಕದಲ್ಲಿರುವರು, ಅದು ಅವರು ಪೌರತ್ವವನ್ನು ಹೊಂದಿರುವ ಸ್ಥಳವಾಗಿರುತ್ತದೆ (ಫಿಲಿಪ್ಪಿ 3:20). ಅವರ ದೇಹಗಳು ಯೇಸುವಿನ ಮಹಿಮೆಯುಳ್ಳ ದೇಹದಂತಾಗುವವು. ಅವರು, ಎಲ್ಲಾ ರಕ್ಷಣೆ ಹೊಂದಿದವರ ಜೊತೆಯಾಗಿ, ಲಯವಾಗುವ, ಭೂಮಿಯ ದೇಹಗಳಿಂದ ಬಿಡುಗಡೆಗೊಳಿಸಲ್ಪಡುವರು ಮತ್ತು ಅವರಿಗೆ ಲಯವಾಗದ, ಆತ್ಮೀಕ ದೇಹಗಳು ಕೊಡಲ್ಪಡುವವು (ನೋಡಿರಿ 1 ಕೊರಿಂಥ 15:42, 43; 2 ಕೊರಿಂಥ 5:1, 2).

# ಅನ್ವಯಿಸುವಿಕೆ

## ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟವರು ಹೊಸ ಲಕ್ಷ್ಯವನ್ನು ಹೊಂದಿರುವರು (3:1, 2)

ಕೊಲೊಸ್ಸೆಯವರು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿದ್ದರು (ವ. 1; 2:12). ಹೇಗೂ, ಆತನೊಂದಿಗೆ ಎಬ್ಬಿಸಲ್ಪಡುವದು ತಕ್ಷಣವೇ ಪರಿಪಕ್ವತೆಯನ್ನು ಒದಗಿಸುವದಿಲ್ಲ. ಕ್ರೈಸ್ತ ಗುಣನಡತೆಯನ್ನು ಬೆಳೆಸಿಕೊಳ್ಳಲು ತಾಳ್ಮೆಯಿಂದ ಪರಿಶ್ರಮ ಪಡಬೇಕಾಗುತ್ತದೆ. ಇದಕ್ಕಾಗಿ ಜೀವನದ ವಿಷಯದಲ್ಲಿ ಯೇಸುವಿನ ಪರಲೋಕದ ದಾರಿಯನ್ನು ಅನುಸರಿಸುವದರ ಮೇಲೆ ದೃಷ್ಟಿಯನ್ನಿಡುವ ಅಗತ್ಯವಿರುತ್ತದೆ. ಹೊಸದಾಗಿ ಹುಟ್ಟಿರುವ ಕ್ರೈಸ್ತರು ಕೂಸುಗಳಿದ್ದಂಥವರಾಗಿದ್ದು ಅವರ ಜೀವಿತಗಳು ದೀಕ್ಷಾಸ್ನಾನದ ವೇಳೆ ಆತ್ಮೀಕ ಹುಟ್ಟುವಿಕೆಯೊಂದಿಗೆ ಆರಂಭಗೊಳ್ಳುತ್ತವೆ (ಯೋಹಾನ 3:3-5). ಆತ್ಮೀಕವಾಗಿ ಬೆಳವಣಿಗೆಗೊಳ್ಳುವದಕ್ಕೆ ಅವರಿಗೆ ದೇವರ ವಾಕ್ಯವೆಂಬ ಹಾಲು ಅಗತ್ಯವಿರುತ್ತದೆ (1 ಪೇತ್ರ 2:2).

ಕ್ರೈಸ್ತರು ತಮ್ಮ ದೃಷ್ಟಿಯನ್ನು ಕ್ರಿಸ್ತನು ವಾಸಿಸುವಂಥ ಮಂಡಲದ ಮೇಲೆ ಕೇಂದ್ರಿಕರಿಸಬೇಕಾಗಿರುತ್ತದೆ (ವಚನಗಳು 1, 2). ನಮ್ಮ ಅಭಿಲಾಷೆಯು ದೇವರ ಕಾರ್ಯಗಳಿಗಾಗಿ ಇರಬೇಕೇ ಹೊರತು ಪ್ರಾಪಂಚಿಕ ಕಾರ್ಯಗಳಿಗೋಸ್ಕರವಲ್ಲ (1 ಯೋಹಾನ 2:15-17). ನಾವು ಭೂಲೋಕದ ಸ್ವತ್ತುಗಳಲ್ಲಿ ಅತಿಯಾಗಿ ಮಮತೆಯನ್ನು ಹೊಂದಿರಬಾರದು. ನಾವು ಪರಲೋಕದ ಕಾರ್ಯಗಳ ಮೇಲೆ ಮುಖ್ಯ ಗಮನವನ್ನು ಕೊಡುವ ಮೂಲಕ ಇದರಿಂದ ದೂರವಿರಬಹುದು. ಹಡಗಿನ ಚಾಲಕನಿಗೆ ತಾನು ಹೋಗಬೇಕಾದ ಸ್ಥಳವು ಗೊತ್ತಿರತಕ್ಕದ್ದು ಮತ್ತು ಆ ಹೋಗಬೇಕಾದ ಬಂದರಿನ ಕಡೆಗೆ

ಹಡಗನ್ನು ನಡಿಸಬೇಕು. ಅನೇಕ ಆಸಕ್ತಿಯನ್ನು ಕೇರಳಿಸುವ ಗಮನಹರಣ ಸಂಗತಿಗಳು ಆತನನ್ನು ಗುರಿಯಿಂದ ದೂರಕ್ಕೆ ಸೆಳೆಯಬಹುದಾಗಿದೆ, ಆದರೆ ಆತನು ತನ್ನ ಪ್ರಯಾಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಬೇಕೆಂದರೆ ತನ್ನ ಹಡಗನ್ನು ಅದರ ಪಥದಲ್ಲಿಯೇ ಇರುವಂತೆ ನೋಡಿಕೊಳ್ಳತಕ್ಕದ್ದು.

ನಾವು ಪರಲೋಕ ಮಂಡಲದಲ್ಲಿನ ಕಾರ್ಯಗಳನ್ನು ಹುಡುಕುತ್ತಿರಬೇಕು. ಕ್ರೈಸ್ತರಾಗಿ ನಮಗಿರುವ ಗುರಿಯು ಉನ್ನತವಾದದ್ದು: ನಾವು ಜೀವಿಸುವ ಕಾಲವೆಲ್ಲಾ ನಿರಂತರವಾಗಿ ಪ್ರಯತ್ನಿಸಬಹುದು, ಮತ್ತು ಹಾಗಿದ್ದರೂ ಕ್ರಿಸ್ತನಂಥ ಪ್ರತಿಯೊಂದು ಗುಣಗಳನ್ನು ಸಂಪೂರ್ಣವಾಗಿ ಬೆಳೆಸಿಕೊಳ್ಳಲಾರೆವು. ಕ್ರೈಸ್ತರ ಜೀವನದ ಸೊಬಗು ಏನೆಂದರೆ ಅದು ಪ್ರತಿಯೊಂದು ವಿಧದಲ್ಲಿಯೂ ಹೆಚ್ಚಚ್ಚಾಗಿ ಯೇಸುವಿನ ಸಾರೂಪ್ಯವುಳ್ಳವರಾಗುವದಕ್ಕೆ ನಿರಂತರವಾದ ಸವಾಲನ್ನು ಒದಗಿಸುತ್ತದೆ.

ಕ್ರೈಸ್ತರು ಕ್ರಿಸ್ತನ ಪರಿಪಕ್ವತೆಯುಳ್ಳವರಾಗಿ ಎಂದಿಗೂ ಸಂಪೂರ್ಣವಾಗಿ ಬೆಳೆಯುವದಕ್ಕಾಗದು; ಪರಿಪೂರ್ಣತೆಯನ್ನು ಎಂದಿಗೂ ಸಾಧಿಸಲಾಗುವದಿಲ್ಲ ಆದರೆ ಅದು ಯೇಸುವಿನ ಹಿಂಬಾಲಕರ ಗುರಿಯಾಗಿರಬೇಕು. ಒಬ್ಬ ಹೈ – ಜಂಪ್ ಮಾಡುವವನು ತನ್ನ ಅತ್ಯುತ್ತಮವಾದ ಗುರಿಗಿಂತ ಎತ್ತರದಲ್ಲಿ ಕಂಬಿಯನ್ನು ಹಾಕಿಟ್ಟುಕೊಳ್ಳುತ್ತಾನೆ, ಅದೇ ರೀತಿಯಲ್ಲಿಯೇ ಪೌಲನು ಸಹ ತನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ಕ್ರಿಸ್ತನಿಗಾಗಿ ಉತ್ತಮ ಸಾಧನೆ ಮಾಡಲು ಪ್ರಯತ್ನಿಸಿದನು (ಫಿಲಿಪ್ಪಿ 3:12-14).

ಕ್ರೈಸ್ತರಿಗೆ ಯೇಸುವೇ ಮಾದರಿಯಾಗಿದ್ದಾನೆ (1 ಕೊರಿಂಥ 11:1; 1 ಯೋಹಾನ 2:6). ಒಂದು ಚಿತ್ರಕ್ಕೆ ಬಣ್ಣಹಾಕುವಾಗ, ಚಿತ್ರಕಲೆಗಾರನು ಸಾಮಾನ್ಯವಾಗಿ ಒಂದು ವಿವರವಾದ ಚಿತ್ರವನ್ನು ಮೂಡಿಸುವದಕ್ಕೆ ಪ್ರಯತ್ನಿಸುತ್ತಾನೆ. ಇದಕ್ಕಾಗಿ ಆತನು ಬಿಡಿಸುತ್ತಿರುವ ವಸ್ತುವನ್ನು ಪುನಃ ಪುನಃ ದೃಷ್ಟಿಸಬೇಕಾಗಿರುತ್ತದೆ, ಮತ್ತು ಒಂದು ಪರಿಪೂರ್ಣವಾದ ಪ್ರತಿಕೃತಿಯನ್ನು ಸೃಷ್ಟಿಸುವ ಪ್ರಯತ್ನಿಸುತ್ತಾ ಜಾಗರೂಕನಾಗಿ ಕೆಲಸ ಮಾಡಬೇಕಾಗುತ್ತದೆ. ಯೇಸುವಿನ ಆತ್ಮೀಕ ಗುಣಗಳನ್ನು ಧರಿಸಿಕೊಳ್ಳುವದರಲ್ಲಿ ಕ್ರೈಸ್ತರು ಸಹ ಹಾಗೆಯೇ ಮಾಡಬೇಕಾಗಿರುತ್ತದೆ (ಎಫೆಸ 4:13).

## ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಡಲ್ಪಟ್ಟಿರುವ ಜೀವ (3:3)

ಪೌಲನು ರೋಮಾಪುರದಲ್ಲಿರುವ ಕ್ರೈಸ್ತರಿಗೆ ಅವರು ಕ್ರಿಸ್ತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾಗಿದ್ದಾರೆ, ಅದು ಪಾಪದ ಪಾಲಿಗೆ ಅವರು ಹೊಂದಿದ ಆತ್ಮೀಕ ಮರಣದ ಗುರುತಾಗಿದ್ದು ಪಾಪದಿಂದ ವಿಮುಕ್ತಗೊಂಡ ಹೊಸ ಜೀವನದಲ್ಲಿ ಫಲಿತಗೊಂಡಿತ್ತೆಂದು ಹೇಳುತ್ತಾನೆ (ರೋಮಾ 6:3, 4, 17, 18). ದೀಕ್ಷಾಸ್ನಾನದ ವೇಳೆಯಲ್ಲಿ, ಪೂರ್ವ ಜೀವನವು ಅಂತ್ಯಗೊಂಡು ಕ್ರಿಸ್ತನಿಗೋಸ್ಕರವಾದ ಒಂದು ಹೊಸ ಜೀವನವು ಆರಂಭಗೊಳ್ಳುವದು (ವ. 3). ಒಬ್ಬನು ಎಂದಿಗೂ ಸ್ನಾನವನ್ನೇ ಮಾಡಿಲ್ಲವೆಂದು ಊಹಿಸಿಕೊಳ್ಳಿರಿ ಮತ್ತು ಬಳಿಕ ಈ ಅನ್ವಯಿಕೆಯನ್ನು ಮಾಡಿರಿ: ಕೇವಲ ಒಂದು ಆತ್ಮೀಕ ಸ್ನಾನದ ಮೂಲಕವಾಗಿ ಎಲ್ಲಾ ಹೊಲಸು, ಅಥವಾ ಪಾಪವು ತೊಳೆದು ಹಾಕಲ್ಪಡಬಹುದು.

ಕ್ರೈಸ್ತರಿಗಿರುವ ಆಶ್ರಯಸ್ಥಾನವೆಂದರೆ ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿರುವದೇ ಆಗಿದೆ. ನಾವು ಆತನಲ್ಲಿ ಆಶ್ರಯವನ್ನು ತೆಗೆದುಕೊಳ್ಳುವದಾದರೆ, ಲೋಕವು ನಮ್ಮನ್ನು

ಕಂಡುಕೊಳ್ಳಲಾರದು ಅಥವಾ ತನ್ನ ದುಷ್ಟ ಕೃತ್ಯಗಳಲ್ಲಿ ಸಿಕ್ಕಿಸಲು ಸಾಧ್ಯವಾಗದು. ನಾವು ಕ್ರಿಸ್ತನೊಂದಿಗೆ ದೇವರಲ್ಲಿ ನೆಲೆಗೊಂಡಿರುವ ತನಕ ಅದರ ಮೋಹಗೊಳಿಸುವ ದಾರಿಗಳಿಗೆ ಮರೆಯಾಗಿರುವೆವು (ವ. 3).

### ಕ್ರಿಸ್ತನು ಹಿಂದಿರುಗಿ ಬರುವಾಗ ನಾವು ಪ್ರಭಾವ ಹೊಂದುವೆವು (3:4)

ಈಗಿನ ಲೋಕವು ಕ್ರೈಸ್ತರನ್ನು ಅವರ ಪ್ರಭಾವಗೊಂಡ ಸ್ಥಿತಿಯಲ್ಲಿ ಕಾಣುವದಿಲ್ಲ, ಯಾಕೆಂದರೆ ಭವಿಷ್ಯದಲ್ಲಿ ಧರಿಸಿಕೊಳ್ಳಲಿರುವ ಪ್ರಭಾವವನ್ನು ನಾವು ಇನ್ನೂ ಹೊಂದಿಕೊಂಡಿರುವದಿಲ್ಲ. ಲೋಕವು ನಮ್ಮನ್ನು ದೇವರ ಮಕ್ಕಳೆಂದು ಗುರುತಿಸದಂಥ ರೀತಿಯಲ್ಲಿ ಲೋಕದಿಂದ ಮರೆಯಾಗಿಡಲ್ಪಟ್ಟಿದ್ದೇವೆ (1 ಯೋಹಾನ 3:1). ನಮ್ಮನ್ನು ಪ್ರಭಾವಕ್ಕೆ ಕೊಂಡೊಯ್ಯುವದಕ್ಕೆ ಕ್ರಿಸ್ತನು ಹಿಂದಿರುಗಿ ಬರುವಾಗ, ನಾವು ಇನ್ನು ಮರೆಯಾಗಿರುವವರಾಗುವದಿಲ್ಲ ಆದರೆ ಆತನ ಸಾರೂಪ್ಯವನ್ನು ಧರಿಸಿಕೊಂಡವರಾಗಿ ಆತನ ಜೊತೆಯಲ್ಲಿ ಪ್ರತ್ಯಕ್ಷಗೊಳ್ಳುವೆವು (ವ. 4; ಫಿಲಿಪ್ಪಿ 3:21; 1 ಯೋಹಾನ 3:2).

ಕ್ರೈಸ್ತರಿಗಾದರೋ, ಅಂತಿಮವಾದ ಗುರಿಯು ಈ ಲಯವಾಗುವ, ತಾತ್ಕಾಲಿಕವಾದ ಲೋಕವು ಅಂತ್ಯಗೊಳ್ಳುವಾಗ ಪ್ರಭಾವವನ್ನು ಧರಿಸಿಕೊಂಡಿರುವದೇ ಆಗಿರುತ್ತದೆ (2 ಕೊರಿಂಥ 4:18). ನಮಗೆ "ನಿರಂತರವಾಗಿರುವ ಗೌರವವಾದ ಪ್ರಭಾವವು" ದೊರಕುವಾಗ ನಮ್ಮ ಎಲ್ಲಾ ಕಷ್ಟಗಳು ಮತ್ತು ಬಾಧೆಗಳು ಪ್ರತಿಫಲದಾಯಕವಾಗುವವು (2 ಕೊರಿಂಥ 4:17).

---

### ಅಡಿಟಿಪ್ಪಣಿಗಳು

[1]ನೋಡಿರಿ ರೋಮಾ 12:1; 1 ಕೊರಿಂಥ 15:58; 2 ಕೊರಿಂಥ 5:17; ಗಲಾತ್ಯ 5:1; ಎಫೆಸ 4:1; ಫಿಲೆಮೋನ 4:1. [2]J. B. Lightfoot, *St. Paul's Epistles to the Colossians and to Philemon*, rev. (London: Macmillan & Co., 1916), 207. [3]Robert G. Bratcher and Eugene A. Nida, *A Translators Handbook on Paul's Letters to the Colossians and to Philemon,* Helps for Translators (New York: United Bible Societies, 1977), 74. [4]ನೋಡಿರಿ ಅಪೊಸ್ತಲರ ಕೃತ್ಯಗಳು 2:34; 5:31; 7:55; ರೋಮಾ 8:34; ಎಫೆಸ 1:20; ಇಬ್ರಿಯ 1:3; 8:1; 10:12; 12:2; 1 ಪೇತ್ರ 3:21, 22. [5]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 1065. [6]ನೋಡಿರಿ ಮತ್ತಾಯ 10:30; ಮಾರ್ಕ 8:17; ಲೂಕ 6:22, 38; ಯೋಹಾನ 14:1; ಯಾಕೋಬ 4:14. [7]William Hendriksen, *Exposition of Colossians and Philemon,* New Testament Commentary (Grand Rapids, Mich.: Baker Book House, 1964), 141. [8]ನೋಡಿರಿ ಯೋಹಾನ 11:25; 14:6; 20:31; 2 ಕೊರಿಂಥ 4:10-12; 2 ತಿಮೊಥೆ 1:1. [9]J. W. McGarvey and Philip Y. Pendleton, *Commentary on Thessalonians, Corinthians, Galatians and Romans* (Cincinnati: Standard Publishing Foundation, n.d.), 20. [10]ಸಹ ನೋಡಿರಿ ಮತ್ತಾಯ 25:31, 32; 2 ಕೊರಿಂಥ 5:10; ಪ್ರಕಟನೆ 20:11, 12.

[11]ಮತ್ತಾಯ 25:31-46; ಯೋಹಾನ 5:22; ಅಪೊಸ್ತಲರ ಕೃತ್ಯಗಳು 10:42; 17:31; 2 ಕೊರಿಂಥ 5:10; 2 ತಿಮೊಥೆ 4:1.